ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೫೦ Volume 150	ಬೆಂಗಳೂರು, ಗುರುವಾರ, ಜನವರಿ ೨೯, ೨೦೧೫ (ಮಾಘ ೯, ಶಕ ವರ್ಷ ೧೯೩೬) Bengaluru, Thursday, January 29, 2015 (Magha 9, Shaka Varsha 1936)	ಸಂಚಿಕೆ ೫ Issue 5

ಭಾಗ ೩

ಸರ್ಕಾರದ ಆಯಾ ಇಲಾಖೆಗಳ ಮುಖ್ಯಸ್ಥರ ಮತ್ತು ಸ್ಥಳೀಯ ಪ್ರಾಧಿಕಾರಿಗಳಿಗೆ ಸಂಬಂಧಿಸಿದ ಅಧಿಸೂಚನೆಗಳು

OFFICE OF THE DISTRICT AND SESSIONS COURT, RAMANAGARA.

NOTIFICATION

ADM/07/2014, DATED: 13-11-2014

Sri. Gopinath, Chief Administrative Officer, District and Sessions Court, Ramanagara is granted 16 days commuted Leave from 24-11-2014 to 09-12-2014 (BDI) and to leave the Headquarters on those days.

Sri. R.V.Venkatesh, Sheristedar is placed in-charge of the post of Chief Administrative Officer of this court, during the above said period.

N.C.SRINIVASA,

P.R 1100 Prl. District and Sessions judge, Ramanagara

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪ ನಿಬಂಧಕರ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ,

ನಂ.146, 8ನೇ ಅಡ್ಡರಸ್ತೆ, 3ನೇ ಮುಖ್ಯ ರಸ್ತೆ, ಮಾರ್ಗೋಸಾ ರಸ್ತೆ, ಬೆಂಗಳೂರು-03.

ವಿಷಯ: ಸ್ಥಗಿತಗೊಂಡಿರುವ ಸಹಕಾರ ಸಂಘಗಳನ್ನು ಸಮಾಪನೆಗೊಳಿಸುವ ಬಗ್ಗೆ.

ಉಲ್ಲೇಖ: 1. ಸಹಕಾರ ಸಂಘಗಳ ಸಹಾಯಕ ನಿಬಂಧಕರ ಪತ್ರ ಸಂಖ್ಯೆ:ಸನಿ47:ಎಡಿಟಿ/05/2014-15 ದಿನಾಂಕ: 19-08-2014.

2. ಪತ್ರಿಕಾ ಪ್ರಕಟಣೆ ದಿನಾಂಕ: 8-09-2014.

3. ಲೆಕ್ಕಪರಿಶೋಧನಾ ಇಲಾಖಾಧಿಕಾರಿಗಳೊಂದಿಗೆ ನಡೆದ ಸಮನ್ವಯ ಸಮಿತಿ ಸಭೆ ನಡವಳಿಗಳು ದಿನಾಂಕ: 15-9-2014.

ಪ್ರಸ್ತಾವನೆ:

ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದೊಡ್ಡಬಳ್ಳಾಪುರ ರವರು ಉಲ್ಲೇಖ (1)ರ ಪತ್ರದಲ್ಲಿ ಸ್ಥಗಿತಗೊಂಡಿರುವ ದೊಡ್ಡಹುಲ್ಲೂರು ಸಣ್ಣ ನೀರಾವರಿ ನೀರು ಬಳಕೆದಾರರ ಸಹಕಾರ ಸಂಘ ನಿ., ಹೊಸಕೋಟೆ ತಾಲ್ಲೂಕು ಮತ್ತು ಕಾಸರಘಟ್ಟ ನೀರು ನಿರ್ವಹಣಾ ಸಹಕಾರ ಸಂಘ ನಿ., ನೆಲಮಂಗಲ ತಾಲ್ಲೂಕು, ಈ ಸಹಕಾರ ಸಂಘಗಳು ತನ್ನ ಬೈಲಾ ಉದ್ದೇಶದಂತೆ ಯಾವುದೇ ಕಾರ್ಯ ನಿರ್ವಹಿಸದೇ ನಿಷ್ಕ್ರೀಯಗೊಂಡಿದ್ದು ವಾರ್ಷಿಕ ಮಹಾಸಭೆ ನಡೆಸಿರುವುದಿಲ್ಲವೆಂದೂ, ಸಂಘದ ಲೆಕ್ಕಪತ್ರಗಳ ಆಡಿಟ್ ಮಾಡಿಸಿರುವುದಿಲ್ಲವೆಂದೂ ಹಾಗೂ ಸದರಿ ಸಂಘದ ಆಡಳಿತ ಮಂಡಳಿ ಸಭೆಗಳು ನಡೆಯುತ್ತಿರುವ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲವೆಂದೂ ಹಾಗೂ ಈ ಸಂಘಗಳನ್ನು ಮುಂದುವರೆಸಲು ಸದಸ್ಯರು ಯಾವುದೇ ಕ್ರಮವನ್ನು ತೆಗೆದುಕೊಳ್ಳುತ್ತಿಲ್ಲವೆಂದು ತಿಳಿಸಿ, ಈ ಸಂಘಗಳನ್ನು ಸಮಾಪನೆಗೊಳಿಸಿ ಸಮಾಪನಾಧಿಕಾರಿಯನ್ನು ನೇಮಿಸಲು ಶಿಫಾರಸ್ಸು ಮಾಡಿರುತ್ತಾರೆ. ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಸದರಿ ಸಂಘಗಳನ್ನು ಹೀಗೆಯೇ ಮುಂದುವರೆಸುವುದರಿಂದ ಸಂಘದ ಸದಸ್ಯರಿಗೆ ಹಾಗೂ ಸಾರ್ವಜನಿಕರಿಗೆ ಯಾವುದೇ ಪ್ರಯೋಜನವಿಲ್ಲವೆಂಬುದನ್ನು ಪರಿಗಣಿಸಿ ಈ ಸಂಘಗಳನ್ನು ಸಮಾಪನೆಗೊಳಿಸುವುದಾಗಿ ದಿನಾಂಕ 8-9-2014ರಂದು ಪತ್ರಿಕಾ ಪ್ರಕಟಣೆಯನ್ನು ನೀಡಿ ಈ ಬಗ್ಗೆ ಯಾರಿಂದಾದರೂ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, 10 ದಿನಗಳೊಳಗಾಗಿ ಸಲ್ಲಿಸುವಂತೆ ತಿಳಿಸಲಾಗಿತ್ತು. ಆದರೆ ಈ ಬಗ್ಗೆ ಯಾರಿಂದಲೂ ನಿಗಧಿತ ಅವಧಿಯೊಳಗಾಗಿ ಯಾವುದೇ ಆಕ್ಷೇಪಣೆಗಳು ಬಂದಿರುವುದಿಲ್ಲವಾದ್ದರಿಂದ ಈ ಸಂಘಗಳನ್ನು ಸಮಾಪನೆಗೊಳಿಸುವುದು ಸೂಕ್ತವೆಂದು ಪರಿಗಣಿಸಿ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

ಆದೇಶ ನಂ: ಡಿಆರ್‌ಬಿ/ಆರ್/ಸಮಾಪನೆ/03/2014-15, ದಿನಾಂಕ: 20-09-2014.

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರ ಕಲಂ 72ರನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂ:ಸಿಓ/139 ಸಿಎಲ್ಎಂ:2010 ದಿನಾಂಕ:17-02-2011ರಂತೆ ದತ್ತವಾಗಿರುವ ಅಧಿಕಾರವನ್ನು ಪ್ರಯೋಗಿಸಿ ಕೆ.ಎನ್.ನಂಜುಂಡೇಗೌಡ, ಸಹಕಾರ ಸಂಘಗಳ ಉಪನಿಬಂಧಕರು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು ಆದ ನಾನು ಈ ಕೆಳಕಂಡ ಸಹಕಾರ ಸಂಘಗಳನ್ನು ಸಮಾಪನೆಗೊಳಿಸಿ ಅವುಗಳ ಹೆಸರಿನ ಮುಂದೆ ನಮೂದಿಸಿರುವವರನ್ನು ಸಮಾಪನಾಧಿಕಾರಿಯನ್ನಾಗಿ ನೇಮಕ ಮಾಡಿರುತ್ತೇನೆ.

ಕ್ರ.ಸಂ.	ಸಹಕಾರ ಸಂಘದ ಹೆಸರು	ಸಮಾಪನಾಧಿಕಾರಿ
1	ದೊಡ್ಡಹುಲ್ಲೂರು ಸಣ್ಣ ನೀರಾವರಿ ನೀರು ಬಳಕೆದಾರರ ಸಹಕಾರ ಸಂಘ ನಿ., ಹೊಸಕೋಟೆ ತಾಲ್ಲೂಕು	ಸಹಕಾರ ಅಭಿವೃದ್ಧಿ ಅಧಿಕಾರಿ, ಹೊಸಕೋಟೆ ತಾಲ್ಲೂಕು
2	ಕಾಸರಘಟ್ಟ ನೀರು ನಿರ್ವಹಣಾ ಸಹಕಾರ ಸಂಘ ನಿ., ನೆಲಮಂಗಲ ತಾಲ್ಲೂಕು	ಸಹಕಾರ ಅಭಿವೃದ್ಧಿ ಅಧಿಕಾರಿ, ನೆಲಮಂಗಲ ತಾಲ್ಲೂಕು

ಸಮಾಪನಾಧಿಕಾರಿಯಾಗಿ ನೇಮಕಗೊಂಡ ಅಧಿಕಾರಿಯು ಸದರಿ ಸಂಘದ ಕಾರ್ಯಭಾರವನ್ನು ವಹಿಸಿಕೊಂಡು ಸಂಘದ ಲೆಕ್ಕಪುಸ್ತಕಗಳನ್ನು ದಾಖಲಾತಿಗಳನ್ನು ವಶಕ್ಕೆ ತೆಗೆದುಕೊಂಡು ಸಂಘದ ಆಸ್ತಿ-ಜವಾಬ್ದಾರಿಗಳನ್ನು ಆದ್ಯತೆಯ ಮೇರೆಗೆ ಸಹಕಾರ ಸಂಘಗಳ ಕಾಯಿದೆ/ನಿಯಮಗಳ ರೀತ್ಯಾ ವಿಲೇವಾರಿ ಮಾಡಿ 90 ದಿನದೊಳಗಾಗಿ ಸಂಘದ ನೋಂದಣಿ ರದ್ದುಗೊಳಿಸಲು ಪ್ರಸ್ತಾವನೆಯನ್ನು ಸಲ್ಲಿಸಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ: 20-09-2014ರಂದು ನನ್ನ ಸಹಿ ಮತ್ತು ಕಛೇರಿ ಮುದ್ರೆಯೊಂದಿಗೆ ನೀಡಿದೆ.

PR: 1101
S.C.10

ಸಹಕಾರ ಸಂಘಗಳ ಉಪ ನಿಬಂಧಕರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪ ನಿಬಂಧಕರ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ,

ನಂ.146, 8ನೇ ಅಡ್ಡರಸ್ತೆ, 3ನೇ ಮುಖ್ಯ ರಸ್ತೆ, ಮಾರ್ಗೋಸಾ ರಸ್ತೆ, ಬೆಂಗಳೂರು-03.

ವಿಷಯ: ದೊಡ್ಡಬಳ್ಳಾಪುರ ತಾಲ್ಲೂಕಿನ ಸ್ಥಗಿತಗೊಂಡಿರುವ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಸಮಾಪನೆಗೊಳಿಸುವ ಬಗ್ಗೆ.

ಉಲ್ಲೇಖ:
1. ಸಹಕಾರ ಸಂಘಗಳ ಸಹಾಯಕ ನಿಬಂಧಕರ, ಪತ್ರ ಸಂಖ್ಯೆ:ಸನಿ47:ಎಡಿಟಿ/05/2014-15 ದಿನಾಂಕ: 19-08-2014.
2. ಪತ್ರಿಕಾ ಪ್ರಕಟಣೆ ದಿನಾಂಕ: 8-09-2014.
3. ಉಪ ವ್ಯವಸ್ಥಾಪಕರು ಬಮೂಲ್ ಶಾಖೆ ದೊಡ್ಡಬಳ್ಳಾಪುರ ರವರ ಪತ್ರ ದಿನಾಂಕ: 09-9-2014.
4. ಲೆಕ್ಕಪರಿಶೋಧನಾ ಇಲಾಖಾಧಿಕಾರಿಗಳೊಂದಿಗೆ ನಡೆದ ಸಮನ್ವಯ ಸಮಿತಿ ಸಭೆ ನಡವಳಿಗಳು ದಿನಾಂಕ: 15-9-2014.

ಪ್ರಸ್ತಾವನೆ:

ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದೊಡ್ಡಬಳ್ಳಾಪುರ ರವರು ಉಲ್ಲೇಖ (1)ರ ಪತ್ರದಲ್ಲಿ ದೊಡ್ಡಬಳ್ಳಾಪುರ ತಾಲ್ಲೂಕಿನ ಸ್ಥಗಿತಗೊಂಡಿರುವ ಅಕ್ಕತಮ್ಮನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘ ನಿ., ದೊಡ್ಡಬಳ್ಳಾಪುರ ಹಾಗೂ ಗಲಿಬಿಲಿಕೋಟೆ ಹಾಲು ಉತ್ಪಾದಕರ ಸಹಕಾರ ಸಂಘ ನಿ., ದೊಡ್ಡಬಳ್ಳಾಪುರ ಈ ಸಹಕಾರ ಸಂಘಗಳು ತನ್ನ ಬೈಲಾ ಉದ್ದೇಶದಂತೆ ಯಾವುದೇ ಕಾರ್ಯ ನಿರ್ವಹಿಸದೇ ನಿಷ್ಕ್ರೀಯಗೊಂಡಿದ್ದು ವಾರ್ಷಿಕ ಮಹಾಸಭೆ ನಡೆಸಿರುವುದಿಲ್ಲವೆಂದೂ, ಸಂಘದ ಲೆಕ್ಕಪತ್ರಗಳ ಆಡಿಟ್ ಮಾಡಿಸಿರುವುದಿಲ್ಲವೆಂದೂ ಹಾಗೂ ಸದರಿ ಸಂಘದ ಆಡಳಿತ ಮಂಡಳಿ ಸಭೆಗಳು ನಡೆಯುತ್ತಿರುವ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲವೆಂದು ಹಾಗೂ ಈ ಸಂಘಗಳನ್ನು ಮುಂದುವರೆಸಲು ಸದಸ್ಯರು ಯಾವುದೇ ಕ್ರಮವನ್ನು ತೆಗೆದುಕೊಳ್ಳುತ್ತಿಲ್ಲವೆಂದು ತಿಳಿಸಿ, ಈ ಸಂಘಗಳನ್ನು ಸಮಾಪನೆಗೊಳಿಸಿ ಸಮಾಪನಾಧಿಕಾರಿಯನ್ನು ನೇಮಿಸಲು ಶಿಫಾರಸ್ಸು ಮಾಡಿರುತ್ತಾರೆ. ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಸದರಿ ಸಂಘಗಳನ್ನು ಹೀಗೆಯೇ ಮುಂದುವರೆಸುವುದರಿಂದ ಸಂಘದ ಸದಸ್ಯರಿಗೆ ಹಾಗೂ ಸಾರ್ವಜನಿಕರಿಗೆ ಯಾವುದೇ ಪ್ರಯೋಜನವಿಲ್ಲವೆಂಬುದನ್ನು ಪರಿಗಣಿಸಿ ಈ ಸಂಘಗಳನ್ನು ಸಮಾಪನೆಗೊಳಿಸುವುದಾಗಿ ದಿನಾಂಕ 8-9-2014ರಂದು ಪತ್ರಿಕಾ ಪ್ರಕಟಣೆಯನ್ನು ನೀಡಿ ಈ ಬಗ್ಗೆ ಯಾರಿಂದಾದರೂ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, 10 ದಿನಗಳೊಳಗಾಗಿ ಸಲ್ಲಿಸುವಂತೆ ತಿಳಿಸಲಾಗಿತ್ತು. ಆದರೆ ಈ ಬಗ್ಗೆ ಯಾರಿಂದಲೂ ನಿಗದಿತ ಅವಧಿಯೊಳಗಾಗಿ ಯಾವುದೇ ಆಕ್ಷೇಪಣೆಗಳು ಬಂದಿರುವುದಿಲ್ಲವಾದ್ದರಿಂದ ಈ ಸಂಘಗಳನ್ನು ಸಮಾಪನೆಗೊಳಿಸುವುದು ಸೂಕ್ತವೆಂದು ಪರಿಗಣಿಸಿ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

ಆದೇಶ ನಂ: ಡಿಆರ್‌ಬಿ/ಆರ್/ಸಮಾಪನೆ/04/2014-15, ದಿನಾಂಕ: 20-09-2014.

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರ ಕಲಂ 72ರನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂ:ಸಿಓ/139/ಸಿಎಲ್ಎಂ:2010 ದಿನಾಂಕ:17-02-2011ರಂತೆ ದತ್ತವಾಗಿರುವ ಅಧಿಕಾರವನ್ನು ಪ್ರಯೋಗಿಸಿ ಕೆ.ಎನ್.ನಂಜುಂಡೇಗೌಡ ಸಹಕಾರ ಸಂಘಗಳ ಉಪನಿಬಂಧಕರು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು ಆದ ನಾನು ಈ ಕೆಳಕಂಡ ಸಹಕಾರ ಸಂಘಗಳನ್ನು ಸಮಾಪನೆಗೊಳಿಸಿ ಅವುಗಳ ಹೆಸರಿನ ಮುಂದೆ ನಮೂದಿಸಿರುವವರನ್ನು ಸಮಾಪನಾಧಿಕಾರಿಯನ್ನಾಗಿ ನೇಮಕ ಮಾಡಿರುತ್ತೇನೆ.

ಕ್ರ.ಸಂ.	ಸಹಕಾರ ಸಂಘದ ಹೆಸರು	ಸಮಾಪನಾಧಿಕಾರಿ
1	ಅಕ್ಕತಮ್ಮನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘ ನಿ., ಅಕ್ಕತಮ್ಮನಹಳ್ಳಿ, ದೊಡ್ಡಬಳ್ಳಾಪುರ ತಾಲ್ಲೂಕು	ಶ್ರೀ ಪ್ರಕಾಶ್, ಮಾರ್ಗ ವಿಸ್ತರಣಾಧಿಕಾರಿಗಳು, ಬೆಂಗಳೂರು ಹಾಲು ಒಕ್ಕೂಟ, ದೊಡ್ಡಬಳ್ಳಾಪುರ ಶಾಖೆ

ಕ್ರ.ಸಂ.	ಸಹಕಾರ ಸಂಘದ ಹೆಸರು	ಸಮಾಪನಾಧಿಕಾರಿ
2	ಗಲಿಬಿಲಿಕೋಟೆ ಹಾಲು ಉತ್ಪಾದಕರ ಸಹಕಾರ ಸಂಘ ನಿ., ಗಲಿಬಿಲಿಕೋಟೆ, ದೊಡ್ಡಬಳ್ಳಾಪುರ ತಾಲ್ಲೂಕು	ಶ್ರೀ ಪ್ರಕಾಶ್, ಮಾರ್ಗ ವಿಸ್ತರಣಾಧಿಕಾರಿಗಳು, ಬೆಂಗಳೂರು ಹಾಲು ಒಕ್ಕೂಟ, ದೊಡ್ಡಬಳ್ಳಾಪುರ ಶಾಖೆ

PR: 1102 ಸಹಕಾರ ಸಂಘಗಳ ಉಪ ನಿಬಂಧಕರು,
S.C.10 ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪ ನಿಬಂಧಕರ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ,

ನಂ.146, 8ನೇ ಅಡ್ಡರಸ್ತೆ, 3ನೇ ಮುಖ್ಯ ರಸ್ತೆ, ಮಾರ್ಗೋಸಾ ರಸ್ತೆ, ಬೆಂಗಳೂರು-03.

ವಿಷಯ: ಪ್ರೋಡ್ಯೂಸರ್ಸ್ ಕಂ ಸೆಲ್ಲರ್ಸ್ ಹ್ಯಾಂಡ್ ಲೂಂ ಅಂಡ್ ಪವರ್‌ಲೂಂ ಇಂಡಸ್ಟ್ರಿಯಲ್ ಸಹಕಾರ ಸಂಘ ನಿ., ದೊಡ್ಡಬಳ್ಳಾಪುರ ಈ ಸಹಕಾರ ಸಂಘವನ್ನು ಸಮಾಪನೆಗೊಳಿಸುವ ಬಗ್ಗೆ.

ಉಲ್ಲೇಖ: 1. ಸಹಕಾರ ಸಂಘಗಳ ಸಹಾಯಕ ನಿಬಂಧಕರ ಪತ್ರ ಸಂಖ್ಯೆ:ಸನಿ47:ಎಡಿಟಿ/05/2014-15 ದಿನಾಂಕ: 19-08-2014.
2. ಪತ್ರಿಕಾ ಪ್ರಕಟಣೆ ದಿನಾಂಕ: 8-09-2014.
3. ಲೆಕ್ಕಪರಿಶೋಧನಾ ಇಲಾಖಾಧಿಕಾರಿಗಳೊಂದಿಗೆ ನಡೆದ ಸಮನ್ವಯ ಸಮಿತಿ ಸಭೆ ನಡವಳಿಗಳು ದಿನಾಂಕ: 15-9-2014.

ಪ್ರಸ್ತಾವನೆ:

ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದೊಡ್ಡಬಳ್ಳಾಪುರ ರವರು ಉಲ್ಲೇಖ (1)ರ ಪತ್ರದಲ್ಲಿ ದೊಡ್ಡಬಳ್ಳಾಪುರ ತಾಲ್ಲೂಕಿನ ಪ್ರೋಡ್ಯೋಸರ್ಸ್ ಕಂ ಸೆಲ್ಲರ್ಸ್ ಹ್ಯಾಂಡ್ ಲೂಂ ಅಂಡ್ ಪವರ್‌ಲೂಂ ಇಂಡಸ್ಟ್ರಿಯಲ್ ಸಹಕಾರ ಸಂಘ ನಿ., ದೊಡ್ಡಬಳ್ಳಾಪುರ ಈ ಸಹಕಾರ ಸಂಘವು ತನ್ನ ಬೈಲಾ ಉದ್ದೇಶದಂತೆ ಯಾವುದೇ ಕಾರ್ಯ ನಿರ್ವಹಿಸದೇ ನಿಷ್ಕ್ರೀಯಗೊಂಡಿದ್ದು ವಾರ್ಷಿಕ ಮಹಾಸಭೆ ನಡೆಸಿರುವುದಿಲ್ಲವೆಂದೂ, ಸಂಘದ ಲೆಕ್ಕಪತ್ರಗಳ ಆಡಿಟ್ ಮಾಡಿಸಿರುವುದಿಲ್ಲವೆಂದೂ ಹಾಗೂ ಸದರಿ ಸಂಘದ ಆಡಳಿತ ಮಂಡಳಿ ಸಭೆಗಳು ನಡೆಯುತ್ತಿರುವ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲವೆಂದೂ ಹಾಗೂ ಈ ಸಂಘವನ್ನು ಮುಂದುವರೆಸಲು ಸದಸ್ಯರು ಯಾವುದೇ ಕ್ರಮವನ್ನು ತೆಗೆದುಕೊಳ್ಳುತ್ತಿಲ್ಲವೆಂದು ತಿಳಿಸಿ, ಈ ಸಂಘವನ್ನು ಸಮಾಪನೆಗೊಳಿಸಿ ಸಮಾಪನಾಧಿಕಾರಿಯನ್ನು ನೇಮಿಸಲು ಶಿಫಾರಸ್ಸು ಮಾಡಿರುತ್ತಾರೆ. ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಸದರಿ ಸಂಘವನ್ನು ಹೀಗೆಯೇ ಮುಂದುವರೆಸುವುದರಿಂದ ಸಂಘದ ಸದಸ್ಯರಿಗೆ ಹಾಗೂ ಸಾರ್ವಜನಿಕರಿಗೆ ಯಾವುದೇ ಪ್ರಯೋಜನವಿಲ್ಲವೆಂಬುದನ್ನು ಪರಿಗಣಿಸಿ ಈ ಸಂಘವನ್ನು ಸಮಾಪನೆಗೊಳಿಸುವುದಾಗಿ ದಿನಾಂಕ 8-9-2014ರಂದು ಪತ್ರಿಕಾ ಪ್ರಕಟಣೆಯನ್ನು ನೀಡಿ ಈ ಬಗ್ಗೆ ಯಾರಿಂದಾದರೂ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, 10 ದಿನಗಳೊಳಗಾಗಿ ಸಲ್ಲಿಸುವಂತೆ ತಿಳಿಸಲಾಗಿತ್ತು. ಆದರೆ ಈ ಬಗ್ಗೆ ಯಾರಿಂದಲೂ ನಿಗಧಿತ ಅವಧಿಯೊಳಗಾಗಿ ಯಾವುದೇ ಆಕ್ಷೇಪಣೆಗಳು ಬಂದಿರುವುದಿಲ್ಲವಾದ್ದರಿಂದ ಈ ಸಂಘವನ್ನು ಸಮಾಪನೆಗೊಳಿಸುವುದು ಸೂಕ್ತವೆಂದು ಪರಿಗಣಿಸಿ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

ಆದೇಶ ನಂ: ಡಿಆರ್‌ಬಿ/ಆರ್/ಸಮಾಪನೆ/05/2014-15, ದಿನಾಂಕ: 20-09-2014.

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಹಾಗೂ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರ ಕಲಂ 72ರನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂ:ಸಿಓ/139/ಸಿಎಲ್ಎಂ:2010 ದಿನಾಂಕ:17-02-2011ರಂತೆ ದತ್ತವಾಗಿರುವ ಅಧಿಕಾರವನ್ನು ಪ್ರಯೋಗಿಸಿ ಕೆ.ಎನ್.ನಂಜುಂಡೇಗೌಡ, ಸಹಕಾರ ಸಂಘಗಳ ಉಪನಿಬಂಧಕರು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು ಆದ ನಾನು ಪ್ರೋಡ್ಯೋಸರ್ಸ್ ಕಂ ಸೆಲ್ಲರ್ಸ್ ಹ್ಯಾಂಡ್ ಲೂಂ ಅಂಡ್ ಪವರ್‌ಲೂಂ ಇಂಡಸ್ಟ್ರಿಯಲ್ ಸಹಕಾರ ಸಂಘ ನಿ., ದೊಡ್ಡಬಳ್ಳಾಪುರ ಈ ಸಹಕಾರ ಸಂಘವನ್ನು ಸಮಾಪನೆಗೊಳಿಸಿ, ಅಧೀಕ್ಷಕರು, ಸಹಕಾರ ಸಂಘಗಳ ಉಪ ನಿಬಂಧಕರ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರನ್ನು ಸಮಾಪನಾಧಿಕಾರಿಯಾಗಿ ನೇಮಕ ಮಾಡಿರುತ್ತೇನೆ.

ಸಮಾಪನಾಧಿಕಾರಿಯಾಗಿ ನೇಮಕಗೊಂಡ ಅಧಿಕಾರಿಯು ಸದರಿ ಸಂಘದ ಕಾರ್ಯಭಾರವನ್ನು ವಹಿಸಿಕೊಂಡು ಸಂಘದ ಲೆಕ್ಕಪುಸ್ತಕಗಳನ್ನು, ದಾಖಲಾತಿಗಳನ್ನು ವಶಕ್ಕೆ ತೆಗೆದುಕೊಂಡು ಸಂಘದ ಆಸ್ತಿ-ಜವಾಬ್ದಾರಿಗಳನ್ನು ಆದ್ಯತೆಯ ಮೇರೆಗೆ ಸಹಕಾರ ಸಂಘಗಳ ಕಾಯಿದೆ ರೀತ್ಯಾ ವಿಲೇವಾರಿ ಮಾಡಿ 90 ದಿನದೊಳಗಾಗಿ ಸಂಘದ ನೋಂದಣಿ ರದ್ದುಗೊಳಿಸಲು ಪ್ರಸ್ತಾವನೆಯನ್ನು ಸಲ್ಲಿಸಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ: 20-9-2014ರಂದು ನನ್ನ ಸಹಿ ಮತ್ತು ಕಛೇರಿ ಮುದ್ರೆಯೊಂದಿಗೆ ನೀಡಿದೆ.

PR: 1103 ಸಹಕಾರ ಸಂಘಗಳ ಉಪ ನಿಬಂಧಕರು,
S.C.10 ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪ ನಿಬಂಧಕರ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ,

ನಂ.146, 8ನೇ ಅಡ್ಡರಸ್ತೆ, 3ನೇ ಮುಖ್ಯ ರಸ್ತೆ, ಮಾರ್ಗೋಸಾ ರಸ್ತೆ, ಬೆಂಗಳೂರು-03..

ವಿಷಯ: ಸ್ಥಗಿತಗೊಂಡಿರುವ ಸಹಕಾರ ಸಂಘಗಳನ್ನು ಸಮಾಪನೆಗೊಳಿಸುವ ಬಗ್ಗೆ.

ಉಲ್ಲೇಖ: 1. ಸಹಕಾರ ಸಂಘಗಳ ಸಹಾಯಕ ನಿಬಂಧಕರ ಪತ್ರ ಸಂಖ್ಯೆ:ಸನಿ47:ಎಡಿಟಿ/05/2014-15 ದಿನಾಂಕ: 19-08-2014.
2. ಪತ್ರಿಕಾ ಪ್ರಕಟಣೆ ದಿನಾಂಕ: 8-09-2014.
3. ಲೆಕ್ಕಪರಿಶೋಧನಾ ಇಲಾಖೆ ನಡೆದ ಸಮನ್ವಯ ಸಮಿತಿ ಸಭೆ ನಡವಳಿಗಳು ದಿನಾಂಕ: 15-9-2014

ಪ್ರಸ್ತಾವನೆ:

ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದೊಡ್ಡಬಳ್ಳಾಪುರ ರವರು ಉಲ್ಲೇಖ (1)ರ ಪತ್ರದಲ್ಲಿ ನೆಲಮಂಗಲ ತಾಲ್ಲೂಕಿನ ಸ್ಥಗಿತಗೊಂಡಿರುವ ದೇವನಹಳ್ಳಿ ಟೌನ್ ಗೃಹ ನಿರ್ಮಾಣ ಸಹಕಾರ ಸಂಘ ನಿ., ದೇವನಹಳ್ಳಿ ತಾಲ್ಲೂಕು ಈ ಸಹಕಾರ ಸಂಘವು ತನ್ನ ಬೈಲಾ ಉದ್ದೇಶದಂತೆ ಯಾವುದೇ ಕಾರ್ಯ ನಿರ್ವಹಿಸದೇ ನಿಷ್ಕ್ರಿಯಗೊಂಡಿದ್ದು ವಾರ್ಷಿಕ ಮಹಾಸಭೆ ನಡೆಸಿರುವುದಿಲ್ಲವೆಂದೂ, ಸಂಘದ ಲೆಕ್ಕಪತ್ರಗಳ ಆಡಿಟ್ ಮಾಡಿಸಿರುವುದಿಲ್ಲವೆಂದೂ ಹಾಗೂ ಸದರಿ ಸಂಘದ ಆಡಳಿತ ಮಂಡಳಿ ಸಭೆಗಳು ನಡೆಯುತ್ತಿರುವ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲವೆಂದು ಹಾಗೂ ಈ ಸಂಘಗಳನ್ನು ಮುಂದುವರೆಸಲು ಸದಸ್ಯರು ಯಾವುದೇ ಕ್ರಮವನ್ನು ತೆಗೆದುಕೊಳ್ಳುತ್ತಿಲ್ಲವೆಂದು ತಿಳಿಸಿ, ಈ ಸಂಘವನ್ನು ಸಮಾಪನೆಗೊಳಿಸಿ ಸಮಾಪನಾಧಿಕಾರಿಯನ್ನು ನೇಮಿಸಲು ಶಿಫಾರಸ್ಸು ಮಾಡಿರುತ್ತಾರೆ. ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಸದರಿ ಸಂಘವನ್ನು ಹೀಗೆಯೇ ಮುಂದುವರೆಸುವುದರಿಂದ ಸಂಘದ ಸದಸ್ಯರಿಗೆ ಹಾಗೂ ಸಾರ್ವಜನಿಕರಿಗೆ ಯಾವುದೇ ಪ್ರಯೋಜನವಿಲ್ಲವೆಂಬುದನ್ನು ಪರಿಗಣಿಸಿ ಈ ಸಂಘವನ್ನು ಸಮಾಪನೆಗೊಳಿಸುವುದಾಗಿ ದಿನಾಂಕ 8-9-2014ರಂದು ಪತ್ರಿಕಾ ಪ್ರಕಟಣೆಯನ್ನು ನೀಡಿ ಈ ಬಗ್ಗೆ ಯಾರಿಂದಾದರೂ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, 10 ದಿನಗಳೊಳಗಾಗಿ ಸಲ್ಲಿಸುವಂತೆ ತಿಳಿಸಲಾಗಿತ್ತು. ಆದರೆ ಈ ಬಗ್ಗೆ ಯಾರಿಂದಲೂ ನಿಗಧಿತ ಅವಧಿಯೊಳಗಾಗಿ ಯಾವುದೇ ಆಕ್ಷೇಪಣೆಗಳು ಬಂದಿರುವುದಿಲ್ಲವಾದ್ದರಿಂದ ಈ ಸಂಘವನ್ನು ಸಮಾಪನೆಗೊಳಿಸುವುದು ಸೂಕ್ತವೆಂದು ಪರಿಗಣಿಸಿ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

ಆದೇಶ ನಂ: ಡಿಆರ್‌ಬಿ/ಆರ್/ಸಮಾಪನೆ/06/2014-15, ದಿನಾಂಕ: 20-09-2014.

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರ ಕಲಂ 72ರನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂ:ಸಿಓ/139/ಸಿಎಲ್‌ಎಂ:2010 ದಿನಾಂಕ:17-02-2011ರಂತೆ ದತ್ತವಾಗಿರುವ ಅಧಿಕಾರವನ್ನು ಪ್ರಯೋಗಿಸಿ ಕೆ.ಎನ್.ನಂಜುಂಡೇಗೌಡ, ಸಹಕಾರ ಸಂಘಗಳ ಉಪನಿಬಂಧಕರು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಬೆಂಗಳೂರು ಆದ ನಾನು ದೇವನಹಳ್ಳಿ ಟೌನ್ ಗೃಹ ನಿರ್ಮಾಣ ಸಹಕಾರ ಸಂಘ ನಿ., ದೇವನಹಳ್ಳಿ ತಾಲ್ಲೂಕು, ಈ ಸಹಕಾರ ಸಂಘವನ್ನು ಸಮಾಪನೆಗೊಳಿಸಿ, ಸಹಕಾರ ಅಭಿವೃದ್ಧಿ ಅಧಿಕಾರಿ, ದೇವನಹಳ್ಳಿ ತಾಲ್ಲೂಕು ರವರನ್ನು ಸಮಾಪನಾಧಿಕಾರಿಯಾಗಿ ನೇಮಕ ಮಾಡಿರುತ್ತೇನೆ.

ಸಮಾಪನಾಧಿಕಾರಿಯಾಗಿ ನೇಮಕಗೊಂಡ ಅಧಿಕಾರಿಯು ಸದರಿ ಸಂಘದ ಕಾರ್ಯಭಾರವನ್ನು ವಹಿಸಿಕೊಂಡು ಸಂಘದ ಲೆಕ್ಕಪುಸ್ತಕಗಳನ್ನು, ದಾಖಲಾತಿಗಳನ್ನು ವಶಕ್ಕೆ ತೆಗೆದುಕೊಂಡು ಸಂಘದ ಆಸ್ತಿ-ಜವಾಬ್ದಾರಿಗಳನ್ನು ಆದ್ಯತೆಯ ಮೇರೆಗೆ ಸಹಕಾರ ಸಂಘಗಳ ಕಾಯಿದೆ/ನಿಯಮಗಳ ರೀತ್ಯಾ ವಿಲೇವಾರಿ ಮಾಡಿ 90 ದಿನದೊಳಗಾಗಿ ಸಂಘದ ನೋಂದಣಿ ರದ್ದುಗೊಳಿಸಲು ಪ್ರಸ್ತಾವನೆಯನ್ನು ಸಲ್ಲಿಸಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ: 20-9-2014ರಂದು ನನ್ನ ಸಹಿ ಮತ್ತು ಕಛೇರಿ ಮುದ್ರೆಯೊಂದಿಗೆ ನೀಡಿದೆ.

PR: 1104 ಸಹಕಾರ ಸಂಘಗಳ ಉಪ ನಿಬಂಧಕರು,
S.C.10 ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪ ನಿಬಂಧಕರ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ,

ನಂ.146, 8ನೇ ಅಡ್ಡರಸ್ತೆ, 3ನೇ ಮುಖ್ಯ ರಸ್ತೆ, ಮಾರ್ಗೋಸಾ ರಸ್ತೆ, ಬೆಂಗಳೂರು-03.

ವಿಷಯ: ಸ್ಥಗಿತಗೊಂಡಿರುವ ಸಹಕಾರ ಸಂಘಗಳನ್ನು ಸಮಾಪನೆಗೊಳಿಸುವ ಬಗ್ಗೆ.

ಉಲ್ಲೇಖ: 1. ಸಹಕಾರ ಸಂಘಗಳ ಸಹಾಯಕ ನಿಬಂಧಕರ ಪತ್ರ ಸಂಖ್ಯೆ:ಸನಿ47:ಎಡಿಟಿ/05/2014-15 ದಿನಾಂಕ: 19-08-2014.
2. ಪತ್ರಿಕಾ ಪ್ರಕಟಣೆ ದಿನಾಂಕ: 8-09-2014.
3. ಲೆಕ್ಕಪರಿಶೋಧನಾ ಇಲಾಖೆ ಸಮನ್ವಯ ಸಮಿತಿ ಸಭೆ ನಡವಳಿಗಳು ದಿನಾಂಕ: 15-9-2014

ಪ್ರಸ್ತಾವನೆ:

ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದೊಡ್ಡಬಳ್ಳಾಪುರ ರವರು ಉಲ್ಲೇಖ (1)ರ ಪತ್ರದಲ್ಲಿ ನೆಲಮಂಗಲ ತಾಲ್ಲೂಕಿನ ಸ್ಥಗಿತಗೊಂಡಿರುವ ಶ್ರೀ ಅನ್ನಪೂರ್ಣೇಶ್ವರಿ ಗೃಹ ನಿರ್ಮಾಣ ಸಹಕಾರ ಸಂಘ ನಿ., ನೆಲಮಂಗಲ ತಾಲ್ಲೂಕು ಈ ಸಹಕಾರ ಸಂಘವು ತನ್ನ ಬೈಲಾ ಉದ್ದೇಶದಂತೆ ಯಾವುದೇ ಕಾರ್ಯ ನಿರ್ವಹಿಸದೇ ನಿಷ್ಕ್ರಿಯಗೊಂಡಿದ್ದು ವಾರ್ಷಿಕ ಮಹಾಸಭೆ ನಡೆಸಿರುವುದಿಲ್ಲವೆಂದೂ, ಸಂಘದ ಲೆಕ್ಕಪತ್ರಗಳ ಆಡಿಟ್ ಮಾಡಿಸಿರುವುದಿಲ್ಲವೆಂದೂ ಹಾಗೂ ಸದರಿ ಸಂಘದ ಆಡಳಿತ ಮಂಡಳಿ ಸಭೆಗಳು ನಡೆಯುತ್ತಿರುವ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲವೆಂದು ಹಾಗೂ ಈ ಸಂಘವನ್ನು ಮುಂದುವರೆಸಲು ಸದಸ್ಯರು ಯಾವುದೇ ಕ್ರಮವನ್ನು ತೆಗೆದುಕೊಳ್ಳುತ್ತಿಲ್ಲವೆಂದು ತಿಳಿಸಿ, ಈ ಸಂಘವನ್ನು ಸಮಾಪನೆಗೊಳಿಸಿ ಸಮಾಪನಾಧಿಕಾರಿಯನ್ನು ನೇಮಿಸಲು ಶಿಫಾರಸ್ಸು ಮಾಡಿರುತ್ತಾರೆ. ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಸದರಿ ಸಂಘವನ್ನು ಹೀಗೆಯೇ ಮುಂದುವರೆಸುವುದರಿಂದ ಸಂಘದ ಸದಸ್ಯರಿಗೆ ಹಾಗೂ ಸಾರ್ವಜನಿಕರಿಗೆ ಯಾವುದೇ ಪ್ರಯೋಜನವಿಲ್ಲವೆಂಬುದನ್ನು ಪರಿಗಣಿಸಿ ಈ ಸಂಘವನ್ನು ಸಮಾಪನೆಗೊಳಿಸುವುದಾಗಿ ದಿನಾಂಕ 8-9-2014ರಂದು ಪತ್ರಿಕಾ ಪ್ರಕಟಣೆಯನ್ನು ನೀಡಿ ಈ ಬಗ್ಗೆ ಯಾರಿಂದಾದರೂ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, 10 ದಿನಗಳೊಳಗಾಗಿ ಸಲ್ಲಿಸುವಂತೆ ತಿಳಿಸಲಾಗಿತ್ತು. ಆದರೆ ಈ ಬಗ್ಗೆ ಯಾರಿಂದಲೂ ನಿಗಧಿತ ಅವಧಿಯೊಳಗಾಗಿ ಯಾವುದೇ ಆಕ್ಷೇಪಣೆಗಳು ಬಂದಿರುವುದಿಲ್ಲವಾದ್ದರಿಂದ ಈ ಸಂಘವನ್ನು ಸಮಾಪನೆಗೊಳಿಸುವುದು ಸೂಕ್ತವೆಂದು ಪರಿಗಣಿಸಿ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

ಆದೇಶ ನಂ: ಡಿಆರ್‌ಬಿ/ಆರ್/ಸಮಾಪನೆ/07/2014-15, ದಿನಾಂಕ: 20-09-2014.

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರ ಕಲಂ 72ರನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂ:ಸಿಓ/139/ಸಿಎಲ್ಎಂ:2010 ದಿನಾಂಕ:17-02-2011ರಂತೆ ದತ್ತವಾಗಿರುವ ಅಧಿಕಾರವನ್ನು ಪ್ರಯೋಗಿಸಿ ಕೆ.ಎನ್.ನಂಜುಂಡೇಗೌಡ, ಸಹಕಾರ ಸಂಘಗಳ ಉಪನಿಬಂಧಕರು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು ಆದ ನಾನು ಶ್ರೀ ಅನ್ನಪೂರ್ಣೇಶ್ವರಿ ಗೃಹ ನಿರ್ಮಾಣ ಸಹಕಾರ ಸಂಘ ನಿ., ನೆಲಮಂಗಲ ತಾಲ್ಲೂಕು, ಈ ಸಹಕಾರ ಸಂಘವನ್ನು ಸಮಾಪನೆಗೊಳಿಸಿ, ಸಹಕಾರ ಅಭಿವೃದ್ಧಿ ಅಧಿಕಾರಿ, ನೆಲಮಂಗಲ ತಾಲ್ಲೂಕು ರವರನ್ನು ಸಮಾಪನಾಧಿಕಾರಿಯಾಗಿ ನೇಮಕ ಮಾಡಿರುತ್ತೇನೆ.

ಸಮಾಪನಾಧಿಕಾರಿಯಾಗಿ ನೇಮಕಗೊಂಡ ಅಧಿಕಾರಿಯು ಸದರಿ ಸಂಘದ ಕಾರ್ಯಭಾರವನ್ನು ವಹಿಸಿಕೊಂಡು ಸಂಘದ ಲೆಕ್ಕಪುಸ್ತಕಗಳನ್ನು, ದಾಖಲಾತಿಗಳನ್ನು ವಶಕ್ಕೆ ತೆಗೆದುಕೊಂಡು ಸಂಘದ ಆಸ್ತಿ-ಜವಾಬ್ದಾರಿಗಳನ್ನು ಆದ್ಯತೆಯ ಮೇರೆಗೆ ಸಹಕಾರ ಸಂಘಗಳ ಕಾಯಿದೆ/ನಿಯಮಗಳ ರೀತ್ಯಾ ವಿಲೇವಾರಿ ಮಾಡಿ 90 ದಿನದೊಳಗಾಗಿ ಸಂಘದ ನೋಂದಣಿ ರದ್ದುಗೊಳಿಸಲು ಪ್ರಸ್ತಾವನೆಯನ್ನು ಸಲ್ಲಿಸಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ: 20-9-2014ರಂದು ನನ್ನ ಸಹಿ ಮತ್ತು ಕಛೇರಿ ಮುದ್ರೆಯೊಂದಿಗೆ ನೀಡಿದೆ.

PR: 1105 ಸಹಕಾರ ಸಂಘಗಳ ಉಪ ನಿಬಂಧಕರು,

S.C.10 ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪ ನಿಬಂಧಕರ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ,

ನಂ.146, 8ನೇ ಅಡ್ಡರಸ್ತೆ, 3ನೇ ಮುಖ್ಯ ರಸ್ತೆ, ಮಾರ್ಗೋಸಾ ರಸ್ತೆ, ಬೆಂಗಳೂರು-03.

ವಿಷಯ: ಸಮಾಪನೆಗೊಂಡಿರುವ ನೆಲಮಂಗಲ ತಾಲ್ಲೂಕಿನ ಎರಡು ಹಾಲು ಉತ್ಪಾದಕರ ಸಹಕಾರ ಸಂಘ ನಿ., ನೋಂದಣಿ ಸಂಖ್ಯೆಯನ್ನು ರದ್ದುಪಡಿಸುವ ಬಗ್ಗೆ.

ಉಲ್ಲೇಖ: 1. ಕಛೇರಿ ಆದೇಶ ಸಂಖ್ಯೆ: ಡಿಆರ್‌ಬಿ (ಆರ್)ಸಮಾಪನೆ/46/2010-11 ದಿನಾಂಕ: 26-10-2010 ಮತ್ತು ಡಿಆರ್‌ಬಿ/ಆರ್/ಸಮಾಪನೆ/46/2010-11 ದಿನಾಂಕ:01-12-2010

2.ಸಹಕಾರ ಸಂಘಗಳ ಸಹಾಯಕ ನಿಬಂಧಕರು ದೊಡ್ಡಬಳ್ಳಾಪುರ ರವರ ಪತ್ರ ಸಂಖ್ಯೆ: ಸನಿ 47/ಸಮಾಪನೆ/2010-11 ದಿನಾಂಕ6/2013 ಮತ್ತು ದಿನಾಂಕ: 26-3-2014

3. ಪತ್ರಿಕಾ ಪ್ರಕಟಣೆ ದಿನಾಂಕ: 8-09-2014.

4.ಸಮಾಪನಾಧಿಕಾರಿಗಳ ಪ್ರಸ್ತಾವನೆ ದಿನಾಂಕ: 27-5-2013 ಮತ್ತು ಪತ್ರ ದಿನಾಂಕ: 26-8-2014

ಪ್ರಸ್ತಾವನೆ:

ನೆಲಮಂಗಲ ತಾಲ್ಲೂಕಿನ ಭಕ್ತನಪಾಳ್ಯ ಹಾಲು ಉತ್ಪಾದಕರ ಸಹಕಾರ ಸಂಘ ನಿ., ಹಾಗೂ ಭೈರಶೆಟ್ಟಿ ಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘ ನಿ., ನೆಲಮಂಗಲ ತಾಲ್ಲೂಕು. ಈ ಸಂಘಗಳು ತಮ್ಮ ಬೈಲಾ ಉದ್ದೇಶದ ರೀತ್ಯ ಕಾರ್ಯ ಚಟುವಟಿಕೆ ನಡೆಸದೆ ಸಮಾಪನೆಯಾಗಿದ್ದು. ಈ ಸಂಘಗಳ ಯಾವುದೇ ಸದಸ್ಯರು ಸಂಘವನ್ನು ಪುನಃಶ್ಚೇತನಗೊಳಿಸಲು ಆಸಕ್ತಿ ತೋರಿಸಿರುವುದಿಲ್ಲ. ಈ ಸಮಾಪನಾ ಸಂಘಗಳಿಂದ ಸದಸ್ಯರಿಗಾಗಲಿ, ಸಾರ್ವಜನಿಕರಿಗಾಗಲಿ ಯಾವುದೇ ಪ್ರಯೋಜನವಿಲ್ಲವೆಂದು ಈ ಹಿಂದೆ ಉಲ್ಲೇಖ (1)ರಲ್ಲಿ ಸೂಚಿಸಿರುವ ಆದೇಶದನ್ವಯ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 72ರನುಸಾರ ಸಮಾಪನೆಗೊಳಿಸಿ ಸಮಾಪನಾಧಿಕಾರಿಯನ್ನಾಗಿ ಶ್ರೀ ಗಣರಾಜು, ಮಾರ್ಗವಿಸ್ತರಣಾಧಿಕಾರಿ ಬಮೂಲ್ ಶಾಖೆ, ನೆಲಮಂಗಲ ಇವರನ್ನು ನೇಮಕ ಮಾಡಲಾಗಿತ್ತು. ಸದರಿ ಸಮಾಪನಾಧಿಕಾರಿಗಳು ಈ ಸಂಘಗಳ ಪ್ರಭಾರವಹಿಸಿಕೊಂಡು ಆಸ್ತಿ ಜವಾಬ್ದಾರಿ ವಿಲೇವಾರಿ ಮಾಡಿ, ಅವುಗಳ ನೋಂದಣಿ ರದ್ಧತಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಈ ಸಂಘಗಳ ಸಮಾಪನಾ ಕಾರ್ಯವನ್ನು ಮುಕ್ತಾಯಗೊಳಿಸಿರುವುದನ್ನು ಪರಿಗಣಿಸಿ ಈ ಸಂಘಗಳ ನೋಂದಣಿ ರದ್ದು ಮಾಡುವಂತೆ ಸಹಕಾರ ಸಂಘಗಳ ಸಹಾಯಕ ನಿಬಂಧಕರು ದೊಡ್ಡಬಳ್ಳಾಪುರ ಇವರು ಸಹ ಉಲ್ಲೇಖ (2)ರ ಪತ್ರದನ್ವಯ ನೋಂದಣಿ ರದ್ಧತಿಗೆ ಶಿಫಾರಸ್ಸು ಮಾಡಿರುತ್ತಾರೆ. ಸದರಿ ಸಂಘಗಳ ನೋಂದಣಿ ರದ್ದುಪಡಿಸುವ ಬಗ್ಗೆ ದಿನಾಂಕ: 5-9-2014ರಂದು ಪತ್ರಿಕಾ ಪ್ರಕಟಣೆಯನ್ನು ಸಹ ಹೊರಡಿಸಲಾಗಿರುತ್ತದೆ. ನೋಂದಣಿ ರದ್ಧತಿ ಬಗ್ಗೆ ಯಾರಿಂದಲೂ ನಿಗಧಿತ ಅವಧಿಯೊಳಗಾಗಿ ಯಾವುದೇ ಆಕ್ಷೇಪಣೆಗಳು ಬಂದಿಲ್ಲದಿರುವುದನ್ನು ಹಾಗೂ ನೋಂದಣಿ ರದ್ಧತಿ ಪ್ರಸ್ತಾವನೆಯನ್ನು ಸಮಾಪನಾಧಿಕಾರಿಗಳಿಂದ ಸಲ್ಲಿಕೆಯಾಗಿರುವುದನ್ನು ಪರಿಗಣಿಸಿ ನೋಂದಣಿ ರದ್ದುಮಾಡುವುದು ಸೂಕ್ತವೆಂದು ಅಭಿಪ್ರಾಯಪಟ್ಟು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಆದೇಶ

ಕ್ರಸಂ ಡಿಆರ್‌ಬಿ(ಆರ್)/ಸಮಾಪನೆ/46/2010-11 ದಿನಾಂಕ: 20-09-2014

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 75ರನುಸಾರ ಹಾಗೂ ಸರ್ಕಾರದ ಅಧಿಸೂಚನೆ ಕ್ರಮಾಂಕ ಸಿಓ 139 ಸಿಎಲ್ಎಂ2010 ದಿನಾಂಕ: 17-2-2011ರನ್ವಯ ದತ್ತವಾಗಿರುವ ಅಧಿಕಾರದಂತೆ ಕೆ.ಎನ್.ನಂಜುಂಡೇಗೌಡ, ಸಹಕಾರ ಸಂಘಗಳ ಉಪನಿಬಂಧಕರು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು ಆದ ನಾನು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಸಹಕಾರ ಸಂಘಗಳ ನೋಂದಣಿ ರದ್ದುಗೊಳಿಸಿ ಆದೇಶಿಸಿರುತ್ತೇನೆ.

ಕ್ರ.ಸಂ.	ನೋಂದಣಿ ರದ್ದುಪಡಿಸಿರುವ ಸಹಕಾರ ಸಂಘಗಳ ಹೆಸರು	ರದ್ದುಪಡಿಸಿದ ನೋಂದಣಿ ಸಂಖ್ಯೆ
1	ಭೈರಶೆಟ್ಟಿ ಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘ ನಿ., ನೆಲಮಂಗಲ ತಾಲ್ಲೂಕು	ಸಂಖ್ಯೆ ಎಆರ್/47/30134/2000-01 ದಿನಾಂಕ: 28-3-2001

ಕ್ರ.ಸಂ.	ನೋಂದಣಿ ರದ್ದುಪಡಿಸಿರುವ ಸಹಕಾರ ಸಂಘಗಳ ಹೆಸರು	ರದ್ದುಪಡಿಸಿದ ನೋಂದಣಿ ಸಂಖ್ಯೆ
2	ಭಕ್ತನಪಾಳ್ಯ ಹಾಲು ಉತ್ಪಾದಕರ ಸಹಕಾರ ಸಂಘ ನಿ., ನೆಲಮಂಗಲ ತಾಲ್ಲೂಕು	ಸಂಖ್ಯೆ ಎಆರ್/47/30123/2000–01 ದಿನಾಂಕ: 8–12–2000

ಈ ಆದೇಶವನ್ನು ನನ್ನ ಸ್ವ ಸಹಿ ಹಾಗೂ ಕಛೇರಿಯ ಮುದ್ರೆಯೊಂದಿಗೆ ದಿನಾಂಕ: 20–9–2014ರಂದು ಹೊರಡಿಸಿರುತ್ತೇನೆ.

PR: 1106
S.C.10

ಸಹಕಾರ ಸಂಘಗಳ ಉಪ ನಿಬಂಧಕರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ

ನಿರ್ದೇಶಕರ ಕಾರ್ಯಾಲಯ, ಕಾರ್ಮಿಕ ಭವನ, 2ನೇ ಮಹಡಿ, ಬನ್ನೇರುಘಟ್ಟ ರಸ್ತೆ, ಬೆಂಗಳೂರು–29

ತಿದ್ದುಪಡಿ

ಸಂಖ್ಯೆ : ಇಎಸ್‌ಟಿ–1/ಆರ್‌ಪಿಪಿ/ಸಿಆರ್–24/2013–14, ದಿನಾಂಕ 04–12–2014

ಕರ್ನಾಟಕ ರಾಜ್ಯಪತ್ರದಲ್ಲಿ ದಿನಾಂಕ 10–07–2014 ರಂದು ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ ಇಲ್ಲಿ ರಚಿಸಲಾದ ರಾಜ್ಯಮಟ್ಟದ ಸ್ಥಳೀಯ ವೃಂದಗಳ ಇದೇ ಸಂಖ್ಯೆಯ ದಿನಾಂಕ 17–06–2014ರ ಅಧಿಸೂಚನೆಯಲ್ಲಿ ಗ್ರೂಪ್–ಡಿ ವೃಂದಕ್ಕೆ ಸಂಬಂಧಿಸಿದಂತೆ ಕ್ರಮಸಂಖ್ಯೆ (9) ರಲ್ಲಿನ ಮಾಹಿತಿಯನ್ನು ಕೆಳಕಂಡಂತೆ ತಿದ್ದುಪಡಿ ಮಾಡಿಕೊಂಡು ಓದಿಕೊಳ್ಳತಕ್ಕದ್ದು.

ರಾಜ್ಯಮಟ್ಟದ ಸ್ಥಳೀಯ ವೃಂದಗಳು

ಅನುಸೂಚಿ

ಕ್ರಮ ಸಂಖ್ಯೆ	ಹುದ್ದೆಯ ಪದನಾಮ ಮತ್ತು ವೇತನ ಶ್ರೇಣಿ (ರೂ.ಗಳಲ್ಲಿ)	ಮಂಜೂರಾದ ವೃಂದ ಬಲ (ವೃಂ ಮತ್ತು ನೇ.ನಿಯಮಗಳ ನಂತರದ ಪರಿಷ್ಕರಣೆ ಸಹಿತ)	ಮುಂಬಡ್ತಿ	ನೇರ ನೇಮಕಾತಿ	ರಾಜ್ಯ ಮಟ್ಟದ ಸ್ಥಳೀಯ ವೃಂದದಲ್ಲಿ ಹೈ–ಕ ಪ್ರದೇಶದವರಿಗಾಗಿ ಗುರುತಿಸಲಾದ ಶೇ. 8 ರಷ್ಟು ಹುದ್ದೆಗಳು		
					ಮುಂಬಡ್ತಿ	ನೇ.ನೇ.	ಒಟ್ಟು
1	**2**	**3**	**4**	**5**	**6**	**7**	**8**
9	**ಗ್ರೂಪ್–ಡಿ** ಜಮೇದಾರ್/ ರೆಕಾರ್ಡ್ ಅಟೆಂಡರ್ (11,000–19,000)	02	ಶೇ.100	ಇಲ್ಲ	01	ಇಲ್ಲ	01

ಬಿ.ಎಸ್. ರಾಮಚಂದ್ರ
ನಿರ್ದೇಶಕರು
ಮತ್ತು ವೃಂದ ನಿಯಂತ್ರಣ ಪ್ರಾಧಿಕಾರ
ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ
ಬೆಂಗಳೂರು

PR. 02
SC. 25

ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ

ನಿರ್ದೇಶಕರ ಕಾರ್ಯಾಲಯ, ಕಾರ್ಮಿಕ ಭವನ, 2ನೇ ಮಹಡಿ, ಬನ್ನೇರುಘಟ್ಟ ರಸ್ತೆ, ಬೆಂಗಳೂರು–29

ತಿದ್ದುಪಡಿ

ಸಂಖ್ಯೆ : ಇಎಸ್‌ಟಿ–1/ಆರ್‌ಪಿಪಿ/ಸಿಆರ್–24/2013–14, ದಿನಾಂಕ 04–12–2014

ಕರ್ನಾಟಕ ರಾಜ್ಯಪತ್ರದಲ್ಲಿ ದಿನಾಂಕ 26–06–2014 ರಂದು ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ ಇಲ್ಲಿ ರಚಿಸಲಾದ ಪ್ರಾದೇಶಿಕ ಸ್ಥಳೀಯ ವೃಂದಗಳ ಇದೇ ಸಂಖ್ಯೆಯ ದಿನಾಂಕ 17–06–2014ರ ಅಧಿಸೂಚನೆಯಲ್ಲಿ ಗ್ರೂಪ್–ಬಿ ವೃಂದಕ್ಕೆ ಸಂಬಂಧಿಸಿದಂತೆ ಕ್ರಮಸಂಖ್ಯೆ (3) ಮತ್ತು ಗ್ರೂಪ್ ಸಿ ವೃಂದಕ್ಕೆ ಸಂಬಂಧಿಸಿದಂತೆ ಕ್ರಮ ಸಂಖ್ಯೆ (6) ರಲ್ಲಿನ ಮಾಹಿತಿಯನ್ನು ಕೆಳಕಂಡಂತೆ ತಿದ್ದುಪಡಿ ಮಾಡಿಕೊಂಡು ಓದಿಕೊಳ್ಳತಕ್ಕದ್ದು.

ಪ್ರಾದೇಶಿಕ ಸ್ಥಳೀಯ ವೃಂದಗಳು

ಅನುಸೂಚಿ

ಕ್ರಮ ಸಂಖ್ಯೆ	ಹುದ್ದೆಯ ಪದನಾಮ ಮತ್ತು ವೇತನ ಶ್ರೇಣಿ (ರೂ.ಗಳಲ್ಲಿ)	ಮಂಜೂರಾದ ವೃಂದ ಬಲ (ವೃಂ ಮತ್ತು ನೇ.ನಿಯಮಗಳ ನಂತರದ ಪರಿಷ್ಕರಣೆ ಸಹಿತ)	ಮುಂಬಡ್ತಿ	ನೇರ ನೇಮಕಾತಿ	ಪ್ರಾದೇಶಿಕ ಸ್ಥಳೀಯ ವೃಂದದಲ್ಲಿ ಹೈ-ಕ ಪ್ರದೇಶದವರಿಗಾಗಿ ಗುರುತಿಸಲಾದ ಶೇ. 75/ ಶೇ. 80/ಶೇ. 85 ರಷ್ಟು ಹುದ್ದೆಗಳು		
					ಮುಂಬಡ್ತಿ	ನೇ.ನೇ.	ಒಟ್ಟು
1	2	3	4	5	6	7	8
3	**ಗ್ರೂಪ್-ಬಿ** ಪತ್ರಾಂಕಿತ ವ್ಯವಸ್ಥಾಪಕರು (21600-40050)	1	ಶೇ.100	ಇಲ್ಲ	ಇಲ್ಲ	ಇಲ್ಲ	ಇಲ್ಲ
6	**ಗ್ರೂಪ್-ಸಿ** ದ್ವಿತೀಯ ದರ್ಜೆ ಸಹಾಯಕರು (11600-2100)	6	ಶೇ.33	ಶೇ.67	2	3	5

ಬಿ.ಎಸ್. ರಾಮಚಂದ್ರ
ನಿರ್ದೇಶಕರು
ಮತ್ತು ವೃಂದ ನಿಯಂತ್ರಣ ಪ್ರಾಧಿಕಾರ
ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ, ಬೆಂಗಳೂರು

PR. 03
SC. 25

KARNATAKA PUBLIC SERVICE COMMISSION

"Udyoga Soudha, Bangalore

NOTIFICATION

No. Adm./210/2014-15/PSC, Bangalore, Dated 20-11-2014

In pursuance of Regulations of the Karnataka Public Service Commission (Conditions of Service) Regulations 1957 and Govt. letter No. ಸಿಆಸುಇ 152 ಸೇಲೋಸೇ 2014, dated 30-10-2014, Sri S.R. Rangamurthy, Hon'ble Member, Karnataka Public Service Commission, is sanctioned 08 days Commuted Leave from 23-08-2014 to 30-08-2014 (b.d.i.) on Medical grounds.

By Order and in the name of the Governor of Karnataka

MANOJ KUMAR MEENA
Secretary
Karnataka Public Service Commission, Bangalore

PR. 04

ಸಹಕಾರ ಇಲಾಖೆ

ಸಹಕಾರ ಸಂಘಗಳ ಸಹಾಯಕ ನಿಬಂಧಕರು ಉತ್ತರ ವಲಯ ವೃತ್ತ ಹಾಗೂ ವಸೂಲಾಧಿಕಾರಿಗಳು, ನಂ. 146, 3ನೇ ಮುಖ್ಯ ರಸ್ತೆ, 8ನೇ ಕ್ರಾಸ್, ಮಾರ್ಗೋಸ ರಸ್ತೆ, ಮಲ್ಲೇಶ್ವರಂ ಸಹಕಾರ ಸಂಘದ ಕಟ್ಟಡ ಮಲ್ಲೇಶ್ವರಂ, ಬೆಂಗಳೂರು-03 ಇವರ ಕಛೇರಿಯ ನಡವಳಿಗಳು

ವಿಷಯ : ವಾಸವಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ಮಲ್ಲೇಶ್ವರಂ ಬೆಂಗಳೂರು ಇದರ ಅಮಲ್ಜಾರಿ ಸಂಖ್ಯೆ : ಸಿಇಪಿ ನಂ. 4/ 2012-13ಕ್ಕೆ ಸಂಬಂಧಪಟ್ಟಂತೆ ಬಹಿರಂಗ ಹರಾಜಿನ ಸಾಲಗಾರರ ಸ್ಥಿರಾಸ್ತಿಯನ್ನು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ನಿಯಮ 38(6)(ಎ) ಅಡಿಯಲ್ಲಿ ಆದೇಶ ಮತ್ತು 38 (7) ರಡಿಯಲ್ಲಿ ಬಹಿರಂಗ ಹರಾಜಿನ ನಡುವಳಿಯನ್ನು ಸ್ಥಿರೀಕರಿಸಿದ ಪ್ರಮಾಣ ಪತ್ರದ ಬಗ್ಗೆ.

ಉಲ್ಲೇಖ : 1. ದಾವಾ ಪ್ರಕರಣದ ಆದೇಶ ಸಂಖ್ಯೆ : ಯುಬಿಸಿ ಆರ್‌ಸಿಎಸ್/ಡಿಐಎಸ್/ಡಿ2/2010–11, ದಿನಾಂಕ : 15–4–2011.

2. ಅಮಲ್ಜಾರಿ ಅರ್ಜಿ ಸಂಖ್ಯೆ : ಸಿಇಪಿ ನಂ. 4/2012–13, ದಿನಾಂಕ : 4–5–2012.

3. ಮಾರಾಟಾಧಿಕಾರಿ, ವಾಸವಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಬೆಂಗಳೂರು ಇವರ ಪತ್ರ ದಿನಾಂಕ : 9–10–2014.

4. ಸರ್ಕಾರದ ಆದೇಶ ಸಂಖ್ಯೆ : ಸಿಓ 139 ಸಿಎಲ್‌ಎಂ 2010, ದಿನಾಂಕ : 17–02–2011.

ಶ್ರೀ ಪ್ರಕಾಶ್ ಎನ್. ನಂ. 41, ಶ್ರೀನಿಧಿ ಲೇಔಟ್, ಮಾರುತಿ ಗಾರ್ಮೆಂಟ್ಸ್ ಹತ್ತಿರ, ಅರೆಹಳ್ಳಿ, ಬೆಂಗಳೂರು–560061 ಇವರು ವಾಸವಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಮಲ್ಲೇಶ್ವರಂ, ಬೆಂಗಳೂರು ಇದರ ಸದಸ್ಯರಾಗಿದ್ದು, ಈ ಸಹಕಾರ ಸಂಘದಲ್ಲಿ ಸಾಲ ಪಡೆದು ಸುಸ್ತಿದಾರರಾದ್ದರಿಂದ ದಾವಾ ಅರ್ಜಿಯ ಪ್ರಕರಣದ ಎದುರು ಅರ್ಜಿದಾರರಾದ ಶ್ರೀ ಪ್ರಕಾಸ್ ಎನ್. ಇವರ ವಿರುದ್ಧ ಸಹಕಾರ ಸಂಘಗಳ ಕಾಯಿದೆ ಕಲಂ 70ರ ಅಡಿಯಲ್ಲಿ ಸಹಕಾರ ಸಂಘದವರು ದಾವಾ ದಾಖಲು ಮಾಡಿದ್ದು, ಸದರಿ ಅರ್ಜಿಯನ್ನು ಇತ್ಯರ್ಥಪಡಿಸಲು ಸಹಕಾರ ಸಂಘಗಳ ಕಾಯದೆ ಕಲಂ 71(1)(ಎ)ರಡಿಯಲ್ಲಿ ಮಾನ್ಯ ಸಹಕಾರ ಸಂಘಗಳ ಜಂಟಿ ನಿಬಂಧಕರು (ಪಟ್ಟಣ ಬ್ಯಾಂಕುಗಳ ವಿಭಾಗ) ಇವರು ಸಹಕಾರ ಸಂಘಗಳ ಉಪ ನಿಬಂಧಕರು, ಉತ್ತರ ವಲಯ ಇವರ ನ್ಯಾಯಾಲಯಕ್ಕೆ ವರ್ಗಾಯಿಸಿದ್ದು ಸದರಿ ನ್ಯಾಯಾಲಯ ದಾವಾ ಪ್ರಕರಣವನ್ನು ವಿಚಾರಣೆ ನಡಿಸಿ ಉಲ್ಲೇಖ (1)ರಂತೆ ತೀರ್ಪು ಆದೇಶ ಹೊರಡಿಸಿರುತ್ತೇನೆ.

ವಾಸವಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಬೆಂಗಳೂರು (ಇನ್ನು ಮುಂದೆ ಅರ್ಜಿದಾರೆಂದು ಉಲ್ಲೇಖಿಸಿದೆ) ಇವರು ದಾವಾ ಪ್ರಕರಣದ ಆದೇಶದಂತೆ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಉತ್ತರ ವಲಯ ಇವರ ಪ್ರಾಧಿಕಾರದಿಂದ ಉಲ್ಲೇಖ (2)ರಂತೆ ಅಮಲ್ಜಾರಿ ಆದೇಶವನ್ನು ಪಡೆದಿರುತ್ತಾರೆ ಅಮಲ್ಜಾರಿಯನ್ನು ಪಡೆದು ಸಂಘದ ಮಾರಾಟಾಧಿಕಾರಿಗಳಿಗೆ ವಿಲೇವಾರಿಗಾಗಿ ವಹಿಸಿರುತ್ತಾರೆ. ಮಾರಾಟಾಧಿಕಾರಿಗಳು ಸಕ್ಷಮ ಪ್ರಾಧಿಕಾರದಿಂದ ಅಮಲ್ಜಾರಿ ಪ್ರಕರಣದ ಪ್ರಕ್ರಾರ್ಯಗಳಂತೆ ಫಾರಂ ನಂ. 2 ಮತ್ತು ಫಾರಂ ನಂ.–6 ನ್ನು ದಾವಾ ಪ್ರಕರಣದ ಶ್ರೀ ಪ್ರಕಾಶ್ ಎನ್ (ಇನ್ನು ಮುಂದೆ ಎದುರು ಅರ್ಜಿದಾರರೆಂದು) ಇವರಿಗೆ ದಿನಾಂಕ : 24–05–2012 ರಂದು ಜಾರಿ ಮಾಡಿದ ಸ್ವೀಕೃತಿಯನ್ನು ಸಂಬಂಧಿಸಿದ ಫಾರಂನಲ್ಲಿ ಪಡೆಯಲಾಗಿರುತ್ತದೆ. ಆದಾಗ್ಯೂ ಸಾಲಗಾರರು ಸಂಘಕ್ಕೆ ಸಾಲ ಮರುಪಾವತಿ ಮಾಡದೆ ಇರುವುದರಿಂದ ಸಂಘಕ್ಕೆ ಅಡಮಾನ ಮಾಡಿರುವ ಷಡ್ಯೂಲ್ ಸ್ವತ್ತನ್ನು ದಾವಾ ಪ್ರಕರಣದ ತೀರ್ಪು ಆದೇಶದಂತೆ ಬಹಿರಂಗ ಹರಾಜಿಗೆ ತರಲು ಫಾರಂ ನಂ. 8 ಮತ್ತು 9ನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಉತ್ತರ ವಲಯ ವೃತ್ತ ಇವರಿಂದ ಸಹಿ ಪಡೆದು ಎದುರು ಅರ್ಜಿದಾರರಿಗೆ ದಿನಾಂಕ : 20–03–2013 ರಂದು ಜಾರಿ ಮಾಡಿರುತ್ತಾರೆ. ಇದಲ್ಲದೆ ಹರಾಜಿನ ನೋಟೀಸುಗಳನ್ನು 30 ದಿನಗಳ ಪೂರ್ವದಲ್ಲಿ ವ್ಯಾಪ್ತಿಯಲ್ಲಿನ ಸಾರ್ವಜನಿಕ ಕಛೇರಿಗಳಾದ ಸಬ್‌ರಿಜಿಸ್ಟ್ರಾರ್ ಕಛೇರಿ, ತಾಲ್ಲೂಕು ಕಛೇರಿ ಮತ್ತು ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಣೆಯನ್ನು ಹೊರಡಿಸಿ ಸಾರ್ವಜನಿಕರಿಗೆ ಹರಾಜಿನ ಬಿಡ್ಡಿನಲ್ಲಿ ಭಾಗವಹಿಸಲು ಹೆಚ್ಚು ಪ್ರಚಾರ ಮಾಡುವ ದೃಷ್ಟಿಯಿಂದ ಕರಪತ್ರಗಳ ಮೂಲಕ ಮಾರಾಟಾಧಿಕಾರಿಗಳು ಪ್ರಚಾರಪಡಿಸಿರುತ್ತಾರೆ. ಇದಲ್ಲದೆ ಹರಾಜಿನ ದಿನ ಮತ್ತು ಇದರ ಹಿಂದಿನ ಪೂರ್ವದ ಎರಡು ದಿನ ಮುಂಚೆ ಬಹಿರಂಗ ಹರಾಜಿನ ಪ್ರಚಾರವನ್ನು ಸಾರ್ವಜನಿಕ ಹಾಗೂ ಹರಾಜಿನ ಸ್ಥಳದಲ್ಲಿ ಟಾಂ ಟಾಂ ಭಾರಿಸುವ ಮೂಲಕ ಹರಾಜಿನ ನಡವಳಿಗಳನ್ನು ನಡೆಸಲು ಹೆಚ್ಚು ಪ್ರಚಾರ ಮಾಡಿ ಸದರಿ ಬಹಿರಂಗ ಹರಾಜನ್ನು ದಿನಾಂಕ : 20–03–2014ರಂದು ಬೆಳಿಗ್ಗೆ 11–00 ಗಂಟೆಗೆ ಸರಿಯಾಗಿ ಹರಾಜಿನ ಇಸ್ತಿಹಾರ್‌ದಲ್ಲಿ ವಿವರಿಸಿದಂತೆ ಶ್ರೀನಿಧಿ ನಿಲಯ, ನಂ. 41, ಮಾರುತಿ ಗಾರ್ಮೆಂಟ್ಸ್ ಹತ್ತಿರ, ಸುಬ್ರಮಣ್ಯಪುರಂ, ಅರೇಹಳ್ಳಿ, ಬೆಂಗಳೂರು 560061 ಇಲ್ಲಿ ಆದೇಶದಲ್ಲಿ ವಿವರಿಸಿದ ಸ್ಥಿರಾಸ್ತಿಯನ್ನು ಬಹಿರಂಗ ಹರಾಜಿಗೆ ತಂದು ನಡವಳಿಗಳನ್ನು ನಡೆಸಿರುತ್ತಾರೆ.

ಬಹಿರಂಗ ಹರಾಜಿನಲ್ಲಿ ಒಟ್ಟು 9 ಜನ ಬಿಡ್ಡುದಾರರು ಭಾಗವಹಿಸಿದ್ದು, ಈ ಪೈಕಿ 4 ಜನ ಭಾಗವಹಿಸಿದ ಬಿಡ್ಡುದಾರರು ಹರಾಜಿನಲ್ಲಿ ಬಿಡ್ಡು ಮಾಡಿರುತ್ತಾರೆ. ಈ ಪೈಕಿ ಶ್ರೀ ಕುಮಾರಸ್ವಾಮಿ ಹೆಚ್.ಕೆ. ಇವರು ರೂ. 32,75,000/–ಗಳಿಗೆ ಅತಿ ಹೆಚ್ಚು ಬಿಡ್ಡು ಮಾಡಿ ಯಶಸ್ವಿ ಬಿಡ್ಡುದಾರರಾಗಿರುತ್ತಾರೆ. ಯಶಸ್ವಿ ಬಿಡ್ಡುದಾರರಾದ ಶ್ರೀ ಕುಮಾರಸ್ವಾಮಿ ಇವರು ಬಿಡ್ಡಿನ ದಿನಾಂಕದಂದು ರೂ. 4,91,250/–ಗಳನ್ನು ಸಂಘಕ್ಕೆ (ರಸೀದಿ ನಂ. 94727 ರಲ್ಲಿ ರೂ. 25,000/– ಮತ್ತು ರಸೀದಿ ಸಂಖ್ಯೆ : 12029ರಲ್ಲಿ ರೂ. 4,66,250/–) ಪಾವತಿಸಿ ಉಳಿದ ರೂ. 25,83,750/– (ರಸೀದಿ ಸಂಖ್ಯೆ : 12091 ರಲ್ಲಿ 2,20,000/– ಮತ್ತು ರಸೀದಿ ಸಂಖ್ಯೆ 12092ರಲ್ಲಿ ರೂ. 25,63,750/–)ಗಳನ್ನು ನಿಗಧಿತ ಗಡುವು ದಿನಾಂಕದ ಪೂರ್ವದಲ್ಲಿ ಯಶಸ್ವಿ ಬಿಡ್ಡಿನ ಮೊತ್ತವನ್ನು ಅರ್ಜಿದಾರ ಸಂಘಕ್ಕೆ ಪಾವತಿಸಿರುತ್ತಾರೆ. ಸಂಘದ ಎದುರು ಅರ್ಜಿದಾರರಾದ ಶ್ರೀ ಪ್ರಕಾಶ್ ಎನ್. ರವರಿಗೆ ಬಹಿರಂಗ ಹರಾಜಿನ ಯಶಸ್ವಿ ಬಿಡ್ಡಿನ ಮಾಹಿತಿಯನ್ನು ತಿಳಿಸಿದಾಗ್ಯೂ ಇವರು ಸಂಘಕ್ಕೆ ಪಾವತಿಸಬೇಕಾದ ಮೊತ್ತವನ್ನು ಬಿಡ್ಡಿನ ದಿನಾಂಕದಿಂದ 30 ದಿನಗಳೊಳಗಾಗಿ ಪಾವತಿಸಿರುವುದಿಲ್ಲವೆಂದು ಈ ಮಧ್ಯೆ ಎದುರು ಅರ್ಜಿದಾರರು ಇವರು ಗೌರವಾನ್ವಿತ ಕರ್ನಾಟಕ ಮೇಲ್ಮನವಿ ಪ್ರಾಧಿಕಾರ ಇಲ್ಲಿಗೆ ಅಪೀಲು ಮಾಡಿದ್ದು. ಗೌರವಾನ್ವಿತ ನ್ಯಾಯಾಲಯದ ಆದೇಶ ಸಂಖ್ಯೆ : ಎಪಿಎಲ್ 81 ದಿನಾಂಕ : 10–04–2014ರಂತೆ ಬಹಿರಂಗ ಹರಾಜಿನ ಪ್ರಕರಣಕ್ಕೆ ಷರತ್ತುಬದ್ಧ ತಡೆಯಾಜ್ಞೆಯನ್ನು ನೀಡಿದ್ದು, ಗೌ॥ ನ್ಯಾಯಾಲಯದ ತಡೆಯಾಜ್ಞೆಯಂತೆ ದಾವಾ ಪ್ರಕರಣದ ಎದುರು ಅರ್ಜಿದಾರರು ತಡೆಯಾಜ್ಞೆಯಲ್ಲಿ ವಿಧಿಸಿರುವ ಷರತ್ತಿನಂತೆ, ಆದೇಶದ 2 ತಿಂಗಳೊಳಗೆ ಅರ್ಜಿದಾರ ಸಂಘಕ್ಕೆ ರೂ. 3,00,000/–ಗಳನ್ನು ಪಾವತಿಸಲು ವಿಫಲವಾಗಿರುತ್ತಾರೆ. ಮತ್ತೊಮ್ಮೆ ಮಾರಾಟಾಧಿಕಾರಿಗಳು ಅವರ ಪತ್ರ ದಿನಾಂಕ : 16–01–2014 ರಂದು ನ್ಯಾಯಾಲಯದ ಆದೇಶವನ್ನು ವಿವರಿಸಿ 7 ದಿನಗಳ ಒಳಗಡೆ ಬ್ಯಾಂಕಿಗೆ ಪಾವತಿಸಬೇಕಾದ ಮೊತ್ತವನ್ನು ಹಾಗೂ ಶೇಕಡಾ 5ರ ಬಿಡ್ಡಿನ ಸಲ್ಯೂಷನ್ ಮೊತ್ತವನ್ನು ಪಾವತಿಸಲು ಸೂಚಿಸಿದ್ದಾಗ್ಯೂ ಅರ್ಜಿದಾರರು ಪಾವತಿಸದೆ ಇರುವುದರಿಂದ ಯಶಸ್ವಿ ಬಿಡ್ಡುದಾರರು ಪದೇ ಪದೇ ಮಾರಾಟಾಧಿಕಾರಿಗಳಿಗೆ ಬಹಿರಂಗ ಹರಾಜಿನ ಮಾರಾಟವನ್ನು ಸ್ಥಿರೀಕರಿಸಿಕೊಡಲು ಕೋರಿಕೊಂಡಿರುವುದಾಗಿ ಅವರ ಉಲ್ಲೇಖ (3) ಪತ್ರದಲ್ಲಿ ವಿವರಿಸಿದ್ದು, ಬಹಿರಂಗ ಹರಾಜಿನ ನಡವಳಿ ಪೂರ್ವದಲ್ಲಿ ಮಾರಾಟಾಧಿಕಾರಿಗಳು ಸಾರ್ವಜನಿಕರಿಂದ ಮತ್ತು ಸ್ಥಿರಾಸ್ತಿಯ ಮೌಲ್ಯ ಮಾಪಕರಿಂದ ಸ್ಥಿರಾಸ್ತಿಯನ್ನು ಮೌಲ್ಯಮಾಪವನ್ನು ಮಾಡಿಸಿಕೊಂಡು ಹರಾಜಿನ ನಡವಳಿಗಳನ್ನು ನಡೆಸಿ ಈ ಪ್ರಾಧಿಕಾರಕ್ಕೆ ಸಂಬಂಧಿಸಿದ ದಾಖಲಾತಿಗಳೊಂದಿಗೆ ಬಹಿರಂಗ ಹರಾಜಿನ ಮಾರಾಟವನ್ನು ಆದೇಶ ಹೊರಡಿಸಿ ಸ್ಥಿರೀಕರಿಸಲು ಕೋರಿಕೊಂಡಿರುವ ಮೇರೆಗೆ ಕೆಳಕಂಡಂತೆ ಆದೇಶ ಹೊರಡಿಸಿದೆ.

ಆದೇಶ ಸಂಖ್ಯೆ : ಸಿಇಪಿ ನಂ. 464/2012–13, ದಿನಾಂಕ : 31–10–2014.

ಎಸ್.ವಿ. ಬಸವರಾಜಪ್ಪ, ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ವಸೂಲಾಧಿಕಾರಿಗಳು, ಉತ್ತರ ವಲಯ ವೃತ್ತ, ಬೆಂಗಳೂರು ನಗರ ಜಿಲ್ಲೆ ಆದ ನಾನು ಉಲ್ಲೇಖ (4) ರಲ್ಲಿ ದತ್ತವಾದ ಅಧಿಕಾರದಂತೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಮತ್ತು ನಿಯಮ 1960ರ ನಿಯಮಗಳು 38(6)(ಎ)ರನ್ವಯ ವಾಸವಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಮಲ್ಲೇಶ್ವರಂ, ಬೆಂಗಳೂರು ಇದರ ಅಮಲ್ಜಾರಿ ಅರ್ಜಿ ಸಂಖ್ಯೆ : ಸಿಇಪಿ ನಂ. 04/2012–13ರಂತೆ ಸಂಘದಿಂದ ಸಾಲ ಪಡೆಯುವಾಗ ಶ್ರೀ ಪ್ರಕಾಶ್ ಎನ್. ಇವರ ಸ್ಥಿರಾಸ್ತಿಯನ್ನು ಇಕ್ವಿಟಬಲ್ ಮಾರ್ಟ್‌ಗೇಜ್ ಬೈ ಡಿಪಾಸಿಟ್ ಆಫ್ ಟೈಟಲ್ ಡೀಡ್ ಮೂಲಕ ಸಂಘಕ್ಕೆ ನೀಡಿದ್ದು, ಈ ಸ್ಥಿರಾಸ್ತಿಯನ್ನು ಮಾರಾಟಾಧಿಕಾರಿಗಳು ಬಹಿರಂಗ ಹರಾಜಿನಲ್ಲಿ ಹರಾಜು ಮಾಡಿದ್ದು, ಇದರಲ್ಲಿ ಯಶಸ್ವಿ

ಬಿಡ್ಡುದಾರರಾದ ಶ್ರೀ ಹೆಚ್.ಕೆ. ಕುಮಾರಸ್ವಾಮಿ ಬಿನ್ ಲೇ॥ ಕುಳ್ಳೇಗೌಡ, ನಂ. 278, 13ನೇ ಮುಖ್ಯ ರಸ್ತೆ, ಎ.ಜಿ. ಬಡಾವಣೆ, ಅರೇಹಳ್ಳಿ, ಬೆಂಗಳೂರು–560061 ಇವರ ಹೆಸರಿಗೆ ಬಹಿರಂಗ ಹರಾಜಿನ ಮಾರಾಟವನ್ನು ದೃಢೀಕರಿಸಿ ಆದೇಶವನ್ನು ಹೊರಡಿಸಿ ಇದೆ ನಿಯಮ 38(7)ರಡಿಯಲ್ಲಿ ಬಹಿರಂಗ ಹರಾಜಿನ ದೃಢೀಕರಣದ ಆದೇಶದ ನಂತರ ಕೆಳಕಂಡ ಸ್ಥಿರಾಸ್ತಿಯನ್ನು ಶ್ರೀ ಹೆಚ್.ಕೆ. ಕುಮಾರಸ್ವಾಮಿ ಬಿನ್ ಲೇ॥ ಕುಳ್ಳೇಗೌಡ ಇವರ ಹೆಸರಿಗೆ ಕೆಳಕಂಡ ಸ್ಥಿರಾಸ್ತಿಯನ್ನು ಸ್ಥಿರೀಕರಿಸಿರುತ್ತೇನೆ.

ಎದುರು ಅರ್ಜಿದಾರರಾದ ಶ್ರೀ ಪ್ರಕಾಶ್ ಎನ್. ರವರ ಈ ಆದೇಶದ ದಿನಾಂಕದಿಂದ ಆಸ್ತಿ ಹಕ್ಕನ್ನು ಕಳೆದುಕೊಂಡಿರುವುದರಿಂದ ಖರೀದಿದಾರರು ಸದರಿ ಸ್ಥಿರಾಸ್ತಿಯ ಸ್ವತ್ತನ್ನು ತಮ್ಮ ಸುಪರ್ದಿಗೆ ಪಡೆದುಕೊಳ್ಳಲು ಸಹ ಆದೇಶಿಸಿದೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ ಬಿನ್ ಲೇ\ ಕುಳ್ಳೇಗೌಡ ಇವರ ಹೆಸರಿಗೆ ವರ್ಗಾಯಿಸಿಬೇಕಾದ ಸ್ಥಿರಾಸ್ತಿಯ ವಿವರ

ಸ್ಥಿರಾಸ್ತಿ ಸಂಖ್ಯೆ ನಂ. 41, ಖಾತಾ ಸಂಖ್ಯೆ 42, ಅಸೆಸ್ಸ ಮೆಂಟ್ ನಂ. 23, ಅರೇಹಳ್ಳಿ ಗ್ರಾಮ, ಅರಕೆರೆ ಉಪ ವಿಭಾಗ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು ಇದರ ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ 30 ಅಡಿಗಳು ಉತ್ತರದಿಂದ ದಕ್ಷಿಣಕ್ಕೆ 40 ಅಡಿಗಳು ಇದರ ಚೆಕ್ಕುಬಂದಿ :

ಉತ್ತರಕ್ಕೆ : ಆಸ್ತಿ ಸಂಖ್ಯೆ 42

ದಕ್ಷಿಣಕ್ಕೆ : ರಸ್ತೆ

ಪೂರ್ವಕ್ಕೆ : ಆಸ್ತಿ ಸಂಖ್ಯೆ 33

ಪಶ್ಚಿಮಕ್ಕೆ : ಅಸ್ತಿ ಸಂಖ್ಯೆ 43

ಈ ಆದೇಶವನ್ನು ನನ್ನ ಸಹಿ ಹಾಗೂ ಕಛೇರಿಯ ಮುದ್ರೆಯೊಂದಿಗೆ ದಿನಾಂಕ : 31–10–2014 ರಂದು ನೀಡಲಾಗಿದೆ.

P.R. 07 **ಸಹಕಾರ ಸಂಘಗಳ ಸಹಾಯಕ ನಿಬಂಧಕರು**

ಹಾಗೂ ವಸೂಲಾಧಿಕಾರಿಗಳು ಉತ್ತರ ವಲಯ ವೃತ್ತ,
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಸಂವಾ 185 ಕೆಎಂಯು 2014, ಬೆಂಗಳೂರು, ದಿನಾಂಕ : 30–09–2014.

ಕರ್ನಾಟಕ ಸರ್ಕಾರವು ಪರಿವಿಡಿಯಲ್ಲಿ ವಿವರಿಸಿರುವ ಬೆಳಗಾವಿ ಜಿಲ್ಲೆಯ ಬೆಳಗಾವಿ ನಗರದ ಪುರಾತನ ಕೋಟೆಯನ್ನು "ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ನಿವೇಶನಗಳು ಮತ್ತು ಅವಶೇಷಗಳು ಅಧಿನಿಯಮ 1961ರ ಕಲಂ 4(3)ರ ಅಡಿ" ರಾಜ್ಯ ಸಂರಕ್ಷಿತ ಸ್ಮಾರಕವನ್ನಾಗಿ ಘೋಷಿಸಲು ಅಭಿಪ್ರಾಯಪಟ್ಟಿದೆ. ಈ ಉದ್ದೇಶದಿಂದ ಸದರಿ ಸ್ಮಾರಕಗಳನ್ನು ರಾಜ್ಯ ಸಂರಕ್ಷಿತ ಸ್ಮಾರಕವೆಂದು ಘೋಷಿಸಲು 60 ದಿನಗಳ ಅವಧಿಯೊಳಗೆ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ.

ಈ ಪ್ರದೇಶವನ್ನು ರಾಜ್ಯ ಸಂರಕ್ಷಿತ ಸ್ಮಾರಕವೆಂದು ಘೋಷಿಸುವ ಬಗ್ಗೆ ಯಾವುದೇ ರೀತಿಯ ಆಕ್ಷೇಪಣೆಗಳು ಬಾಧಿತರಾದವರಿಂದ ಮೇಲ್ಕಾಣಿಸಿದ ಅವಧಿಯೊಳಗೆ ರಾಜ್ಯ ಸರ್ಕಾರಕ್ಕೆ ಸ್ವೀಕರಿಸಿದಲ್ಲಿ ಸರ್ಕಾರವು ಅದನ್ನು ಪರಿಶೀಲಿಸುವುದು. ಈ ಅಧಿಸೂಚನೆಯ ಕುರಿತಾದ ಯಾವುದೇ ಆಕ್ಷೇಪಣೆಗಳನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕನ್ನಡ, ಸಂಸ್ಕೃತಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕೊಠಡಿ ಸಂಖ್ಯೆ 2, ವಿಕಾಸ ಸೌಧ, ನೆಲಮಹಡಿ, ಬೆಂಗಳೂರು–560 001 ಇವರಿಗೆ ಸಲ್ಲಿಸಬಹುದಾಗಿದೆ. ಮೇಲ್ಕಾಣಿಸಿದ ಅವಧಿಯೊಳಗೆ ಸ್ವೀಕರಿಸಲಾದ ಆಕ್ಷೇಪಣೆಗಳನ್ನು ಪರಿಶೀಲಿಸಿ ಅಂತಿಮ ಅಧಿಸೂಚನೆ ಹೊರಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಮಂಜುನಾಥ ಪಾಟೀಲ್
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ (ಆಡಳಿತ ಕನ್ನಡ).

ಪರಿವಿಡಿ

ಅಧಿಸೂಚನೆ ಸಂಖ್ಯೆ : ಕಸಂವಾ 185 ಕೆಎಂಯು 2014, ದಿನಾಂಕ : 30–09–2014.

ಜಿಲ್ಲೆ	ತಾಲ್ಲೂಕು	ಇರುವ ಸ್ಥಳ	ಸ್ಮಾರಕ/ಕಟ್ಟಡದ ಹೆಸರು	ಮೇರೆಗಳು (ಚಕ್ಕುಬಂದಿ) (ಆಡಳಿತ ಕನ್ನಡ)		ಒಡೆತನ	ಷರಾ
1	2	3	4	7		8	9
ಬೆಳಗಾವಿ	ಬೆಳಗಾವಿ	ಕ್ಯಾಂಟೋನ್ ಮೆಂಟ್ ಬೆಳಗಾವಿ ನಗರ	ಬೆಳಗಾವಿ ಕೋಟೆ	ಪೂರ್ವಕ್ಕೆ	ಸರ್ವೆ ನಂ. 342, 323, 323ಎ, 327, ಕೋಟೆ ಕೆರೆ ಹಾಗೂ ಬಾಗಲಕೋಟೆ ರಸ್ತೆ	ಭಾರತ ಸರ್ಕಾರದ ಒಡೆತನ	ಪುರಾತನ ಕೋಟೆಯಾಗಿದೆ
				ಪಶ್ಚಿಮಕ್ಕೆ	ಸರ್ವೆ ನಂ. 327 ಹಾಗೂ ಶಹಾಪುರಕ್ಕೆ ಹೋಗುವ ರಸ್ತೆ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಆವರಣ		

ಜಿಲ್ಲೆ	ತಾಲ್ಲೂಕು	ಇರುವ ಸ್ಥಳ	ಸ್ಮಾರಕ/ಕಟ್ಟಡದ ಹೆಸರು	ಮೇರೆಗಳು (ಚಕ್ಕುಬಂದಿ) (ಆಡಳಿತ ಕನ್ನಡ)		ಒಡೆತನ	ಷರಾ
1	2	3	4	7		8	9
				ಉತ್ತರಕ್ಕೆ	ಸರ್ವೇ ನಂ. 327/1, 324/1, 324/ಎ, 324/ಬಿ, 324/ಸಿ, 328ಎ, ಬಸ್ ಸ್ಟ್ಯಾಂಡ್ ರಸ್ತೆ ಹಾಗೂ ಸರ್ಕಾರಿ ಪ್ರವಾಸಿ ಮಂದಿರ		
				ದಕ್ಷಿಣಕ್ಕೆ	327		

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಮಂಜುನಾಥ ಪಾಟೀಲ್

ಸರ್ಕಾರದ ಅಧೀನ ಕಾರ್ಯದರ್ಶಿ

ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ (ಆಡಳಿತ ಕನ್ನಡ).

PR: 11

SC-100

ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಸಚಿವಾಲಯ

ತಿದ್ದುಪಡಿ

ಸಂಖ್ಯೆ : ಕಸಂವಾ 185 ಕೆಎಂಯು 2014 (ಭಾಗ), ಬೆಂಗಳೂರು, ದಿನಾಂಕ : 13–10–2014.

ಅಧಿಸೂಚನೆ ಸಂಖ್ಯೆ : ಕಸಂವಾ 185 ಕೆಎಂಯು 2014, ದಿನಾಂಕ : 30–09–2014ರಂದು ಹೊರಡಿಸಿರುವ "**ಪರಿವಿಡಿಯ ಕ್ರಮ ಸಂಖ್ಯೆ : 5 ಮತ್ತು 6ನ್ನು ಪೂರ್ವಕ್ಕೆ : ಸರ್ವೇ ನಂ. 342, 323, 323ಎ, 327, ಕೋಟೆ ಕೆರೆ ಹಾಗೂ ಬಾಗಲಕೋಟೆ ರಸ್ತೆ, ಪಶ್ಚಿಮಕ್ಕೆ ಸರ್ವೇ ನಂ. 327 ಹಾಗೂ ಶಹಾಪುರಕ್ಕೆ ಹೋಗುವ ರಸ್ತೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಆವರಣ, ಉತ್ತರಕ್ಕೆ : ಸರ್ವೇ ನಂ. 327/1, 324/1, 324/ಎ, 324/ಬಿ, 324/ಸಿ, 328ಎ, ಬಸ್ ಸ್ಟ್ಯಾಂಡ್ ರಸ್ತೆ ಹಾಗೂ ಸರ್ಕಾರಿ ಪ್ರವಾಸಿ ಮಂದಿರ, ಮತ್ತು ಭಾರತ ಸರ್ಕಾರ**" ಎಂಬುದರ ಬದಲಾಗಿ ಈ ಕೆಳಕಂಡಂತೆ ತಿದ್ದಿ ಓದಿಕೊಳ್ಳತಕ್ಕದ್ದು.

5	6	7		8
ಸರ್ವೇ ನಂ. 331	11.56 ಎಕರೆ	ಪೂರ್ವ	ಸರ್ವೇ ನಂ. 327	ಸರ್ಕಾರ
ಸರ್ವೇ ನಂ. 332	21.90 ಎಕರೆ	ಪಶ್ಚಿಮ	ಸರ್ವೇ ನಂ. 324,324/ಎ, 324/ಬಿ, 324/ಸಿ, 234/1, 315, 328/ಎ	
		ಉತ್ತರ	ಸರ್ವೇ ನಂ 324, 327, 326, ದುರ್ಗಾ ದೇವಿ ದೇವಾಲಯ, ಎಸ್.ಪಿ. ತೋರಟ್ ರಸ್ತೆ, ಕೋಟೆ ಉತ್ತರ ಗೇಟ್	
		ದಕ್ಷಿಣ	ಸರ್ವೇ ನಂ. 327 ಉತ್ತರದಿಂದ ಪ್ರಾರಂಭಗೊಂಡ ಪೂರ್ವಭಾಗ ದಾಟಿ ದಕ್ಷಿಣ ಭಾಗದವರೆಗೂ ಕೋಟೆಯು ವೃತ್ತಾಕಾರದಲ್ಲಿ ಸುತ್ತುವರೆದಿರುತ್ತದೆ. 327/1 ಭಾರತೇಶ್ ಏಜುಕೇಷನ್ ಟ್ರಸ್ಟ್	

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಮಂಜುನಾಥ ಪಾಟೀಲ್

ಸರ್ಕಾರದ ಅಧೀನ ಕಾರ್ಯದರ್ಶಿ

ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ (ಆಡಳಿತ ಕನ್ನಡ).

PR: 12

SC-100

ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯ, (ಉದ್ಯೋಗ ವಿಭಾಗ), "ಕೌಶಲ್ಯ ಭವನ", ಡೈರಿ ಸರ್ಕಲ್ ಹತ್ತಿರ, ಬನ್ನೇರುಘಟ್ಟ ರಸ್ತೆ, ಬೆಂಗಳೂರು.

ಅಧಿಸೂಚನೆ

ಸಂಖ್ಯೆ.ಉತನಿ/ಉದ್ಯೋಗ/ಆಡಳಿತ-1/ವಿವ-34/2013-14, ದಿನಾಂಕ: 03-12-2014.

ವಿಷಯ : ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಸ್ಥಳೀಯ ವೃಂದಗಳ ರಚನೆ, ಹಂಚಿಕೆ ಮತ್ತು ವ್ಯಕ್ತಿಗಳ ವರ್ಗಾವಣೆ) ನಿಯಮಗಳು-2013 ರನ್ವಯ ಸ್ಥಳೀಯ ವೃಂದಕ್ಕೆ ವ್ಯಕ್ತಿಗಳ ಹಂಚಿಕೆ ಕುರಿತು.

ಉಲ್ಲೇಖ :
1. ಸರ್ಕಾರದ ಆದೇಶ ಸಂಖ್ಯೆ.ಡಿಪಿಎಆರ್ 06 ಪಿಎಲ್‌ಎಕ್ಸ್ 2012 ಬೆಂಗಳೂರು, ದಿನಾಂಕ: 6-11-2013.
2. ನಿರ್ದೇಶನಾಲಯದ ಅಧಿಸೂಚನೆ ಸಂಖ್ಯೆ.ಉತನಿ / ಉದ್ಯೋಗ / ಆಡಳಿತ-1 / ವಿವ-34 / 2013-14, ದಿ: 10-3-2014.
3. ಸರ್ಕಾರದ ಅಧಿಸೂಚನೆ ಸಂಖ್ಯೆ.ಡಿಪಿಎಆರ್ 43 ಹೆಚ್‌ಕೆಸಿ 2013, ದಿನಾಂಕ: 29-1-2014.
4. ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ.ಉತನಿ / ಉದ್ಯೋಗ / ಆಡಳಿತ-1 / ವಿವ-34 / 2013-14, ದಿ: 28-3-2014.
5. ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ.ಸಿಆಸುಇ 33 ಹೈಕಉ 2014, ದಿನಾಂಕ: 10-4-2014.

ಭಾರತೀಯ ಸಂವಿಧಾನದ ಅನುಚ್ಛೇದ-371 (ಜೆ) ಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ರಂತೆ ಹೊರಡಿಸಿರುವ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ-2013 ರ 3 ಮತ್ತು 13 ನೇ ಕಂಡಿಕೆಗೆ ಅನುಸಾರವಾಗಿ ಉದ್ಯೋಗ ಮತ್ತು ತರಬೇತಿ ಇಲಾಖೆಯ ಉದ್ಯೋಗ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೂಪ್-ಬಿ, ಗ್ರೂಪ್-ಸಿ ಮತ್ತು ಗ್ರೂಪ್-ಡಿ ವೃಂದಗಳ ಹುದ್ದೆಗಳಿಗೆ ಪದೋನ್ನತಿ ಮತ್ತು ನೇಮಕಾತಿ ಸಲುವಾಗಿ ಸ್ಥಳೀಯ ವೃಂದದಲ್ಲಿ ಗ್ರೂಪ್-ಬಿ ಹುದ್ದೆಗೆ ಶೇ.75 ರ ಪ್ರಮಾಣದಲ್ಲಿ, ಗ್ರೂಪ್-ಸಿ ಹುದ್ದೆಗೆ ಶೇ.80 ರ ಪ್ರಮಾಣದಲ್ಲಿ ಮತ್ತು ಗ್ರೂಪ್-ಡಿ ಹುದ್ದೆಗೆ ಶೇ.85 ರ ಪ್ರಮಾಣದಲ್ಲಿ ಹಾಗೂ ರಾಜ್ಯ ಮಟ್ಟದ ಕಚೇರಿಗಳಲ್ಲಿ ಶೇ.8 ರ ಪ್ರಮಾಣದಲ್ಲಿ ಹುದ್ದೆಗಳನ್ನು ಗುರುತಿಸಿ, ಮೀಸಲಿರಿಸಿ ನಿರ್ದೇಶನಾಲಯದ ಸಂಖ್ಯೆ.ಉತನಿ / ಉದ್ಯೋಗ / ಆಡಳಿತ-1 / ವಿವ-34 / 2013-14, ದಿನಾಂಕ: 10-3-2014 ರಲ್ಲಿ ಸ್ಥಳೀಯ ವೃಂದವನ್ನು ರಚಿಸಿ, ಅಧಿಸೂಚನೆ ಹೊರಡಿಸಲಾಗಿರುತ್ತದೆ.

ಉಲ್ಲೇಖ (3) ರ ಸರ್ಕಾರದ ಅಧಿಸೂಚನೆಯನ್ವಯ, ಹೈದರಾಬಾದ್-ಕರ್ನಾಟಕ ಪ್ರದೇಶದ ಅಧಿಕಾರಿ / ನೌಕರರಿಂದ ಸ್ಥಳೀಯ ವೃಂದವನ್ನು ಆಯ್ಕೆ ಮಾಡಿಕೊಳ್ಳುವ ಸಂಬಂಧ ಅಭಿಮತವನ್ನು ಸಲ್ಲಿಸಲು ಉಲ್ಲೇಖ (4) ರಲ್ಲಿನ ನಿರ್ದೇಶನಾಲಯದ ಸುತ್ತೋಲೆಯಲ್ಲಿ ಸೂಚನೆಗಳನ್ನು ನೀಡಿ, ಸ್ಥಳೀಯ ವ್ಯಕ್ತಿಗಳ ಮಾನದಂಡವನ್ನು ಪೂರೈಸುವ ಅರ್ಹತಾ ಪ್ರಮಾಣ ಪತ್ರದೊಂದಿಗೆ ಸ್ಥಳೀಯ ವೃಂದವನ್ನು ಸೇರಲು ಇಚ್ಛಿಸುವ ಅಧಿಕಾರಿ / ನೌಕರರು ನಿಗದಿತ ನಮೂನೆಗಳಲ್ಲಿ ಅಭಿಮತ ವ್ಯಕ್ತಪಡಿಸಲು ಸೂಚಿಸಲಾಗಿತ್ತು. ಅದರಂತೆ, ಈ ಸಂಬಂಧ ಸ್ವೀಕರಿಸಿರುವ ಅಭಿಮತಗಳನ್ನು ಪರಿಶೀಲಿಸಲಾಗಿದೆ.

ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಸ್ಥಳೀಯ ವೃಂದಗಳ ರಚನೆ, ಹಂಚಿಕೆ ಮತ್ತು ವ್ಯಕ್ತಿಗಳ ವರ್ಗಾವಣೆ) ನಿಯಮಗಳು-2013 ರ ನಿಯಮ 6 ರ ಉಪ ನಿಯಮ (2) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಉಲ್ಲೇಖ (5) ರ ಸರ್ಕಾರದ ಅಧಿಕೃತ ಜ್ಞಾಪನದಲ್ಲಿನ ಸೂಚನೆಗಳನ್ವಯ, ಸ್ಥಳೀಯ ವೃಂದ ಆಯ್ಕೆಗೆ ಅಭಿಮತ ಸಲ್ಲಿಸಿರುವ ವೃಂದಗಳಾದ ಸಹಾಯಕ ಉದ್ಯೋಗಾಧಿಕಾರಿ, ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರು, ಬೆರಳಚ್ಚುಗಾರರು ಮತ್ತು ಗ್ರೂಪ್-ಡಿ ವೃಂದದ ನೌಕರರುಗಳಿಗೆ ಸಂಬಂಧಿಸಿದಂತೆ ಜೇಷ್ಠತೆಯ ಕ್ರಮಾನುಗತದಂತೆ (1-1-2014 ರಲ್ಲಿದ್ದಂತೆ) ನೌಕರರನ್ನು ಆಯಾ ವೃಂದಗಳ ಸ್ಥಳೀಯ ವೃಂದಕ್ಕೆ ಅನುಸೂಚಿಯಲ್ಲಿ ತಿಳಿಸಿರುವಂತೆ ಹಂಚಿಕೆ ಮಾಡಿ ಈ ಮೂಲಕ ಅಧಿಸೂಚನೆ ಹೊರಡಿಸಲಾಗಿದೆ.

ಉಳಿದಂತೆ, ಉದ್ಯೋಗಾಧಿಕಾರಿ ಮತ್ತು ಹಿರಿಯ ಬೆರಳಚ್ಚುಗಾರ ವೃಂದಗಳಲ್ಲಿ ಯಾರೂ ಅಭಿಮತ ಸಲ್ಲಿಸದಿರುವ ಕಾರಣ ಈ ವೃಂದಗಳಲ್ಲಿ ರಚಿಸಲ್ಪಟ್ಟ ಸ್ಥಳೀಯ ವೃಂದಕ್ಕೆ ಯಾರನ್ನೂ ಹಂಚಿಕೆ ಮಾಡಿರುವುದಿಲ್ಲ. ಹೀಗಾಗಿ, ಸದರಿ ಸ್ಥಳೀಯ ವೃಂದದ ಹುದ್ದೆಗಳು ಪೂರ್ಣವಾಗಿ ರಿಕ್ತ ಸ್ಥಾನಗಳಾಗಿರುತ್ತವೆ.

ಬಿ.ಎಂ.ವಿಜಯ ಶಂಕರ್, ಭಾ.ಆ.ಸೇ.

ಆಯುಕ್ತರು, ಉದ್ಯೋಗ ಮತ್ತು ತರಬೇತಿ.

ಅನುಸೂಚಿ

ಸಂಖ್ಯೆ.ಉತನಿ/ಉದ್ಯೋಗ/ಆಡಳಿತ–1/ವಿವ–34/2013–14, ದಿನಾಂಕ: 3–12–2014.

(ಎ) ವೃಂದದ ಹೆಸರು:– ಉದ್ಯೋಗಾಧಿಕಾರಿ.

1. ಸೇವೆ: ಉದ್ಯೋಗ ಮತ್ತು ತರಬೇತಿ ಇಲಾಖೆ (ಉದ್ಯೋಗ ವಿಭಾಗ).

2. *ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಒಟ್ಟು ಮೂಲ ವೃಂದ ಬಲ:–* **31**

(ಅ) *ಸ್ಥಳೀಯ ವೃಂದ ಬಲ*–**5**

(ಆ) *ರಾಜ್ಯ ಮಟ್ಟದ ಸ್ಥಳೀಯ ವೃಂದ ಬಲ*–**4**

3. *ಅನುಚ್ಛೇದ 371 (ಜೆ) ಅಡಿಯಲ್ಲಿ ಸ್ಥಳೀಯ ವೃಂದದಲ್ಲಿ ಶೇ.75 ರ ಪ್ರಮಾಣದಲ್ಲಿ ಮೀಸಲಿರಿಸಿದ ಹುದ್ದೆಗಳು*–**4**

4. *ಅನುಚ್ಛೇದ 371 (ಜೆ) ಅಡಿಯಲ್ಲಿ ರಾಜ್ಯ ಮಟ್ಟದ ಸ್ಥಳೀಯ ವೃಂದದ ರಚನೆಗೆ ಶೇ.8 ರ ಪ್ರಮಾಣದಲ್ಲಿ ಮೀಸಲಿರಿಸಿದ ಹುದ್ದೆಗಳು* **–1**

5. **ಹುದ್ದೆಗಳ ಭರ್ತಿ ವಿಧಾನ :** ಎ. ಶೇ.50 ರ ಪ್ರಮಾಣದ ನೇರ ನೇಮಕಾತಿ.

ಬಿ. ಶೇ.50 ರ ಪ್ರಮಾಣದ ಮುಂಬಡ್ತಿ.

6. **ಪೋಷಕ ವೃಂದ :–** ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಅರ್ಹತೆ ಹೊಂದಿರುವ ಸಹಾಯಕ ಉದ್ಯೋಗಾಧಿಕಾರಿಗಳು.

7. ಅಭಿಮತ ನೀಡುವ ಮೂಲಕ ಸ್ಥಳೀಯ ವೃಂದವನ್ನು ಆಯ್ಕೆ ಮಾಡಿಕೊಂಡ ಸೇವೆಯಲ್ಲಿರುವ ಅರ್ಹ ಅಭ್ಯರ್ಥಿಗಳು:–

I ಮುಂಬಡ್ತಿ – ಇಲ್ಲ

II ನೇರ ನೇಮಕಾತಿ – ಇಲ್ಲ.

III ಒಟ್ಟು:– –

8. ಹಂಚಿಕೆ ಮಾಡಿದ ನಂತರ ಸ್ಥಳೀಯ ವೃಂದದಲ್ಲಿ ಲಭ್ಯವಿರುವ ಖಾಲಿ ಹುದ್ದೆಗಳು.

I ಮುಂಬಡ್ತಿ – **2**

II ನೇರ ನೇಮಕಾತಿ – **3**

III ಒಟ್ಟು:– 5

ಮೂಲ ವೃಂದ ಬಲ	371(ಜೆ) ಅಡಿಯಲ್ಲಿ ಸ್ಥಳೀಯ ವೃಂದದಲ್ಲಿ ಶೇ.75 ರಷ್ಟು ಪ್ರಮಾಣದಲ್ಲಿ ಮೀಸಲಿರಿಸಿದ ಹುದ್ದೆಗಳು			371(ಜೆ) ಅಡಿಯಲ್ಲಿ ರಾಜ್ಯ ಮಟ್ಟದ ಕಚೇರಿಯಲ್ಲಿ ಶೇ.8 ರಷ್ಟು ಪ್ರಮಾಣದಲ್ಲಿ ಮೀಸಲಿರಿಸಿದ ಹುದ್ದೆಗಳು			ಮೀಸಲಾದ ಒಟ್ಟು ಹುದ್ದೆಗಳು.			ಸ್ಥಳೀಯ ವೃಂದಕ್ಕೆ ಮೀಸಲಿರಿಸಿದ ಹುದ್ದೆಗಳ ನಂತರ ಮೂಲ ವೃಂದದಲ್ಲಿ ಉಳಿದ ಹುದ್ದೆಗಳ ಸಂಖ್ಯಾಬಲ.			ಸ್ಥಳೀಯ ವೃಂದ ಸೇರ್ಪಡೆಗೆ ಅಭಿಮತ ನೀಡಿರುವವರ ಸಂಖ್ಯೆ.			ಅಭಿಮತದ ತರುವಾಯ ಸ್ಥಳೀಯ ವೃಂದದಲ್ಲಿ ಭರ್ತಿ ಸಲುವಾಗಿ ಉಳಿಯುವ ರಿಕ್ತ ಸ್ಥಾನಗಳು.			ಅಭಿಮತ ನೀಡಿಕೆ ಆಧಾರದಲ್ಲಿ ಸ್ಥಳೀಯ ವೃಂದಕ್ಕೆ ಹಂಚಿಕೆ ಮಾಡಲಾದ ಇಲಾಖೆಯ ಉದ್ಯೋಗ ವಿಭಾಗದಲ್ಲಿರುವ ಸ್ಥಳೀಯ ನೌಕರರು (ಜೇಷ್ಠತಾ ಪಟ್ಟಿಯ ಕ್ರಮಾನುಗತ ಕ್ರಮ ಸಂಖ್ಯೆ ಹಾಗೂ ಮೂಲ ರೋಸ್ಟರ್ ಸಹಿತ).	ರೋಸ್ಟರ್ ಸೈಕಲ್ ಪ್ರಕಾರ ರೋಸ್ಟರ್ ಬಿಂದುಗಳು.		ಸ್ಥಳೀಯ ವೃಂದಕ್ಕೆ ಹಂಚಿಕೆ ಯಾದ ನೌಕರರು ಪ್ರತಿನಿಧಿ ಸುತ್ತಿರುವ ರೋಸ್ಟರ್ ಬಿಂದುಗಳು		ರೋಸ್ಟರ್ ಸಮ ತೋಲನಕ್ಕೆ ಪರಿಗಣಿಸ ಬೇಕಾದ ಬಿಟ್ಟು ಹೋದ ರೋಸ್ಟರ್ ಬಿಂದುಗಳು.		ರೋಸ್ಟರ್ ಸೈಕಲ್‌ನಲ್ಲಿ ಬಿಟ್ಟುಹೋದ ರೋಸ್ಟರ್ ಬಿಂದು ಗಳನ್ನು ಬದಲಾವಣೆ ಮಾಡಿರುವ ರೋಸ್ಟರ್ ಬಿಂದುಗಳು.	
	ಇತರೆ	ಹೈ.ಕ.	ಒಟ್ಟು	ಇತರೆ	ಹೈ.ಕ.	ಒಟ್ಟು	ಇತರೆ	ಹೈ.ಕ.	ಒಟ್ಟು	ಇತರೆ	ಹೈ.ಕ.	ಒಟ್ಟು	ಇತರೆ	ಹೈ.ಕ.	ಒಟ್ಟು	ಇತರೆ	ಹೈ.ಕ.	ಒಟ್ಟು	ಶ್ರೀಮತಿ/ಶ್ರೀ	ಇತರೆ 1–33	ಹೈ.ಕ. 1–100	ಇತರೆ	ಹೈ.ಕ.	ಇತರೆ	ಹೈ.ಕ.	ಇತರೆ	ಹೈ.ಕ.
1	2	3	4	5	6	7	8	9	10	11	12	13	14	15	16	17	18	19	20	21	22	23	24	25	26	27	28
31	2	2	4	–	1	1	2	3	5	13	13	26	–	–	–	2	3	5	ಅಭಿಮತ ಯಾರು ನೀಡಿರುವುದಿಲ್ಲ.								

ಬಿ.ಎಂ.ವಿಜಯ ಶಂಕರ್, ಭಾ.ಆ.ಸೇ.

ಆಯುಕ್ತರು, ಉದ್ಯೋಗ ಮತ್ತು ತರಬೇತಿ.

ಅನುಸೂಚಿ

ಸಂಖ್ಯೆ:ಉತನಿ/ಉದ್ಯೋಗ/ಆಡಳಿತ–1/ವಿವ–34/2013–14, ದಿನಾಂಕ: 03–12–2014.

(ಎ) ವೃಂದದ ಹೆಸರು :– ಸಹಾಯಕ ಉದ್ಯೋಗಾಧಿಕಾರಿ.

1. ಸೇವೆ : ಉದ್ಯೋಗ ಮತ್ತು ತರಬೇತಿ ಇಲಾಖೆ (ಉದ್ಯೋಗ ವಿಭಾಗ).
2. *ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಒಟ್ಟು ಮೂಲ ವೃಂದ ಬಲ:–* **45**
   - (ಅ) *ಸ್ಥಳೀಯ ವೃಂದ ಬಲ–***7**
   - (ಆ) *ರಾಜ್ಯ ಮಟ್ಟದ ಸ್ಥಳೀಯ ವೃಂದ ಬಲ–***6**
3. *ಅನುಚ್ಛೇದ 371 (ಜೆ) ಅಡಿಯಲ್ಲಿ ಸ್ಥಳೀಯ ವೃಂದದಲ್ಲಿ ಶೇ.80 ರ ಪ್ರಮಾಣದಲ್ಲಿ ಮೀಸಲಿರಿಸಿದ ಹುದ್ದೆಗಳು–***6**
4. *ಅನುಚ್ಛೇದ 371 (ಜೆ) ಅಡಿಯಲ್ಲಿ ರಾಜ್ಯ ಮಟ್ಟದ ಸ್ಥಳೀಯ ವೃಂದದ ರಚನೆಗೆ ಶೇ.8 ರ ಪ್ರಮಾಣದಲ್ಲಿ ಮೀಸಲಿರಿಸಿದ ಹುದ್ದೆಗಳು* **–1**
5. *ಹುದ್ದೆಗಳ ಭರ್ತಿ ವಿಧಾನ:* ಎ. ಶೇ.50 ರ ಪ್ರಮಾಣದ ನೇರ ನೇಮಕಾತಿ.
   ಬಿ. ಶೇ.50 ರ ಪ್ರಮಾಣದ ಮುಂಬಡ್ತಿ.
6. *ಪೋಷಕ ವೃಂದ:*– ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಅರ್ಹತೆ ಹೊಂದಿರುವ ಪ್ರಥಮ ದರ್ಜೆ ಸಹಾಯಕರು ಮತ್ತು ಶೀಘ್ರಲಿಪಿಗಾರರು.

7. ಅಭಿಮತ ನೀಡುವ ಮೂಲಕ ಸ್ಥಳೀಯ ವೃಂದವನ್ನು ಆಯ್ಕೆ ಮಾಡಿಕೊಂಡ ಸೇವೆಯಲ್ಲಿರುವ ಅರ್ಹ ಅಭ್ಯರ್ಥಿಗಳು:–

I ಮುಂಬಡ್ತಿ – **2**

II ನೇರ ನೇಮಕಾತಿ – **ಇಲ್ಲ.**

III ಒಟ್ಟು:– 2

8. ಹಂಚಿಕೆ ಮಾಡಿದ ನಂತರ ಸ್ಥಳೀಯ ವೃಂದದಲ್ಲಿ ಲಭ್ಯವಿರುವ ಖಾಲಿ ಹುದ್ದೆಗಳು.

I ಮುಂಬಡ್ತಿ – **1**

II ನೇರ ನೇಮಕಾತಿ – **4**

III ಒಟ್ಟು:– 5

ಮೂಲ ವೃಂದ ಬಲ	371(ಜೆ) ಅಡಿಯಲ್ಲಿ ಸ್ಥಳೀಯ ವೃಂದದಲ್ಲಿ ಶೇ.80 ರಷ್ಟು ಪ್ರಮಾಣದಲ್ಲಿ ಮೀಸಲಿರಿಸಿದ ಹುದ್ದೆಗಳು			371(ಜೆ) ಅಡಿಯಲ್ಲಿ ರಾಜ್ಯ ಮಟ್ಟದ ಕಚೇರಿಯಲ್ಲಿ ಶೇ.8 ರಷ್ಟು ಪ್ರಮಾಣದಲ್ಲಿ ಮೀಸಲಿರಿಸಿದ ಹುದ್ದೆಗಳು			ಮೀಸಲಾದ ಒಟ್ಟು ಹುದ್ದೆಗಳು.			ಸ್ಥಳೀಯ ವೃಂದಕ್ಕೆ ಮೀಸಲಿರಿಸಿದ ಹುದ್ದೆಗಳ ನಂತರ ಮೂಲ ವೃಂದದಲ್ಲಿ ಉಳಿದ ಹುದ್ದೆಗಳ ಸಂಖ್ಯಾಬಲ.			ಸ್ಥಳೀಯ ವೃಂದ ಸೇರ್ಪಡೆಗೆ ಅಭಿಮತ ನೀಡಿರುವವರ ಸಂಖ್ಯೆ.			ಅಭಿಮತದ ತರುವಾಯ ಸ್ಥಳೀಯ ವೃಂದದಲ್ಲಿ ಭರ್ತಿ ಸಲುವಾಗಿ ಉಳಿಯುವ ರಿಕ್ತ ಸ್ಥಾನಗಳು.			ಅಭಿಮತ ನೀಡಿಕೆ ಆಧಾರದಲ್ಲಿ ಸ್ಥಳೀಯ ವೃಂದಕ್ಕೆ ಹಂಚಿಕೆ ಮಾಡಲಾದ ಇಲಾಖೆಯ ಉದ್ಯೋಗ ವಿಭಾಗದಲ್ಲಿರುವ ಸ್ಥಳೀಯ ನೌಕರರು (ಜೇಷ್ಠತಾ ಪಟ್ಟಿಯ ಕ್ರಮಾನುಗತ ಕ್ರಮ ಸಂಖ್ಯೆ ಹಾಗೂ ಮೂಲ ರೋಸ್ಟರ್ ಸಹಿತ).	ರೋಸ್ಟರ್ ಸೈಕಲ್ ಪ್ರಕಾರ ರೋಸ್ಟರ್ ಬಿಂದುಗಳು.		ಸ್ಥಳೀಯ ವೃಂದಕ್ಕೆ ಹಂಚಿಕೆ ಯಾದ ನೌಕರರು ಪ್ರತಿನಿಧಿ ಸುತ್ತಿರುವ ರೋಸ್ಟರ್ ಬಿಂದುಗಳು		ರೋಸ್ಟರ್ ಸಮ ತೋಲನಕ್ಕೆ ಪರಿಗಣಿಸ ಬೇಕಾದ ಬಿಟ್ಟು ಹೋದ ರೋಸ್ಟರ್ ಬಿಂದುಗಳು.		ರೋಸ್ಟರ್ ಸೈಕಲ್‌ನಲ್ಲಿ ಬಿಟ್ಟುಹೋದ ರೋಸ್ಟರ್ ಬಿಂದು ಗಳನ್ನು ಬದಲಾವಣೆ ಮಾಡಿರುವ ರೋಸ್ಟರ್ ಬಿಂದುಗಳು.	
	ಮುಂಬಡ್ತಿ	ನೇ.ನೇ.	ಒಟ್ಟು	ಮುಂಬಡ್ತಿ	ನೇ.ನೇ.	ಒಟ್ಟು	ಮುಂಬಡ್ತಿ	ನೇ.ನೇ.	ಒಟ್ಟು	ಮುಂಬಡ್ತಿ	ನೇ.ನೇ.	ಒಟ್ಟು	ಮುಂಬಡ್ತಿ	ನೇ.ನೇ.	ಒಟ್ಟು	ಮುಂಬಡ್ತಿ	ನೇ.ನೇ.	ಒಟ್ಟು	ಶ್ರೀಮತಿ/ಶ್ರೀ	ಮುಂಬಡ್ತಿ 1–33	ನೇ.ನೇ. 1–100	ಮುಂಬಡ್ತಿ	ನೇ.ನೇ.	ಮುಂಬಡ್ತಿ	ನೇ.ನೇ.	ಮುಂಬಡ್ತಿ	ನೇ.ನೇ.
1	2	3	4	5	6	7	8	9	10	11	12	13	14	15	16	17	18	19	20	21	22	23	24	25	26	27	28
45	3	3	6	–	1	1	3	4	7	19	19	38	2	–	2	1	4	5	1) ಬಿ.ಎಫ್.ಬೀರನಾಯ್ಕರ್, ಜಿಉವಿಕ,ಕೊಪ್ಪಳ. ಮುಂ.(11)(ಸಾ.ಅ.).	1 (ಪ.ಜಾ)	–	ಸಾ.ಅ	–	ಪ.ಜಾ	–	ಸಾ.ಅ.	–
																			2) ಭಾರತಿ, ಜಿಉವಿಕ, ಗುಲ್ಬರ್ಗ. ಮುಂ.(22)(ಸಾ.ಅ.).	2 (ಪ.ಪಂ)	–	ಸಾ.ಅ	–	ಪ.ಪಂ	–	ಸಾ.ಅ.	–
ರೋಸ್ಟರ್ ಸೈಕಲ್‌ನಲ್ಲಿ ತಪ್ಪಿಹೋದ ರೋಸ್ಟರ್ ಬಿಂದುಗಳ ವಿವರಗಳು																								ಪಜಾ–1 ಪಪಂ–1			

ಬಿ.ಎಂ.ವಿಜಯ ಶಂಕರ್, ಭಾ.ಆ.ಸೇ.
ಆಯುಕ್ತರು, ಉದ್ಯೋಗ ಮತ್ತು ತರಬೇತಿ.

ಅನುಸೂಚಿ

ಸಂಖ್ಯೆ.ಉತನಿ/ಉದ್ಯೋಗ/ಆಡಳಿತ–1/ವಿವ–34/2013–14, ದಿನಾಂಕ: 03–12–2014.

(ಎ) *ವೃಂದದ ಹೆಸರು:–* ಪ್ರಥಮ ದರ್ಜೆ ಸಹಾಯಕ.

1. ಸೇವೆ: ಉದ್ಯೋಗ ಮತ್ತು ತರಬೇತಿ ಇಲಾಖೆ (ಉದ್ಯೋಗ ವಿಭಾಗ).

2. *ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಒಟ್ಟು ಮೂಲ ವೃಂದ ಬಲ:–* **29**

   (ಅ) *ಸ್ಥಳೀಯ ವೃಂದ ಬಲ–***5**

   (ಆ) *ರಾಜ್ಯ ಮಟ್ಟದ ಸ್ಥಳೀಯ ವೃಂದ ಬಲ–***4**

3. *ಅನುಚ್ಛೇದ 371 (ಜೆ) ಅಡಿಯಲ್ಲಿ ಸ್ಥಳೀಯ ವೃಂದದಲ್ಲಿ ಶೇ.80 ರ ಪ್ರಮಾಣದಲ್ಲಿ ಮೀಸಲಿರಿಸಿದ ಹುದ್ದೆಗಳು–***4**

4. *ಅನುಚ್ಛೇದ 371 (ಜೆ) ಅಡಿಯಲ್ಲಿ ರಾಜ್ಯ ಮಟ್ಟದ ಸ್ಥಳೀಯ ವೃಂದದ ರಚನೆಗೆ ಶೇ.8 ರ ಪ್ರಮಾಣದಲ್ಲಿ ಮೀಸಲಿರಿಸಿದ ಹುದ್ದೆಗಳು* **–1**

5. *ಹುದ್ದೆಗಳ ಭರ್ತಿ ವಿಧಾನ:* ಎ. ಶೇ.50 ರ ಪ್ರಮಾಣದ ನೇರ ನೇಮಕಾತಿ.

   ಬಿ. ಶೇ.50 ರ ಪ್ರಮಾಣದ ಮುಂಬಡ್ತಿ.

6. *ಪೋಷಕ ವೃಂದ:–* ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಅರ್ಹತೆ ಹೊಂದಿರುವ ದ್ವಿತೀಯ ದರ್ಜೆ ಸಹಾಯಕರು.

7. ಅಭಿಮತ ನೀಡುವ ಮೂಲಕ ಸ್ಥಳೀಯ ವೃಂದವನ್ನು ಆಯ್ಕೆ ಮಾಡಿಕೊಂಡ ಸೇವೆಯಲ್ಲಿರುವ ಅರ್ಹ ಅಭ್ಯರ್ಥಿಗಳು:–

   I ಮುಂಬಡ್ತಿ – ಇಲ್ಲ

   II ನೇರ ನೇಮಕಾತಿ – **4**

   III ಒಟ್ಟು:– 4

8. ಹಂಚಿಕೆ ಮಾಡಿದ ನಂತರ ಸ್ಥಳೀಯ ವೃಂದದಲ್ಲಿ ಲಭ್ಯವಿರುವ ಖಾಲಿ ಹುದ್ದೆಗಳು.

   I ಮುಂಬಡ್ತಿ – **1**

   II ನೇರ ನೇಮಕಾತಿ – ಇಲ್ಲ

   III ಒಟ್ಟು – 1

ಮೂಲ ವೃಂದ ಬಲ	371(ಜೆ) ಅಡಿಯಲ್ಲಿ ಸ್ಥಳೀಯ ವೃಂದದಲ್ಲಿ ಶೇ.80 ರಷ್ಟು ಪ್ರಮಾಣದಲ್ಲಿ ಮೀಸಲಿರಿಸಿದ ಹುದ್ದೆಗಳು			371(ಜೆ) ಅಡಿಯಲ್ಲಿ ರಾಜ್ಯ ಮಟ್ಟದ ಕಚೇರಿಯಲ್ಲಿ ಶೇ.8 ರಷ್ಟು ಪ್ರಮಾಣದಲ್ಲಿ ಮೀಸಲಿರಿಸಿದ ಹುದ್ದೆಗಳು			ಮೀಸಲಾದ ಒಟ್ಟು ಹುದ್ದೆಗಳು.			ಸ್ಥಳೀಯ ವೃಂದಕ್ಕೆ ಮೀಸಲಿರಿಸಿದ ಹುದ್ದೆಗಳ ನಂತರ ಮೂಲ ವೃಂದದಲ್ಲಿ ಉಳಿದ ಹುದ್ದೆಗಳ ಸಂಖ್ಯಾಬಲ.			ಸ್ಥಳೀಯ ವೃಂದ ಸೇರ್ಪಡೆಗೆ ಅಭಿಮತ ನೀಡಿರುವವರ ಸಂಖ್ಯೆ.			ಅಭಿಮತದ ತರುವಾಯ ಸ್ಥಳೀಯ ವೃಂದದಲ್ಲಿ ಭರ್ತಿ ಸಲುವಾಗಿ ಉಳಿಯುವ ರಿಕ್ತ ಸ್ಥಾನಗಳು.			ಅಭಿಮತ ನೀಡಿಕೆ ಆಧಾರದಲ್ಲಿ ಸ್ಥಳೀಯ ವೃಂದಕ್ಕೆ ಹಂಚಿಕೆ ಮಾಡಲಾದ ಇಲಾಖೆಯ ಉದ್ಯೋಗ ವಿಭಾಗದಲ್ಲಿರುವ ಸ್ಥಳೀಯ ನೌಕರರು (ಜೇಷ್ಠತಾ ಪಟ್ಟಿಯ ಕ್ರಮಾನುಗತ ಕ್ರಮ ಸಂಖ್ಯೆ ಹಾಗೂ ಮೂಲ ರೋಸ್ಟರ್ ಸಹಿತ).	ರೋಸ್ಟರ್ ಸೈಕಲ್ ಪ್ರಕಾರ ರೋಸ್ಟರ್ ಬಿಂದುಗಳು.		ಸ್ಥಳೀಯ ವೃಂದಕ್ಕೆ ಹಂಚಿಕೆ ಯಾದ ನೌಕರರು ಪ್ರತಿನಿಧಿ ಸುತ್ತಿರುವ ರೋಸ್ಟರ್ ಬಿಂದುಗಳು		ರೋಸ್ಟರ್ ಸಮ ತೋಲನಕ್ಕೆ ಪರಿಗಣಿಸ ಬೇಕಾದ ಬಿಟ್ಟು ಹೋದ ರೋಸ್ಟರ್ ಬಿಂದುಗಳು.		ರೋಸ್ಟರ್ ಸೈಕಲ್‌ನಲ್ಲಿ ಬಿಟ್ಟುಹೋದ ರೋಸ್ಟರ್ ಬಿಂದುಗಳನ್ನು ಬದಲಾವಣೆ ಮಾಡಿರುವ ರೋಸ್ಟರ್ ಬಿಂದುಗಳು.	
	ಹೈ.ಕ	ಇತರೆ	ಒಟ್ಟು	ಹೈ.ಕ	ಇತರೆ	ಒಟ್ಟು	ಹೈ.ಕ	ಇತರೆ	ಒಟ್ಟು	ಹೈ.ಕ	ಇತರೆ	ಒಟ್ಟು	ಹೈ.ಕ	ಇತರೆ	ಒಟ್ಟು	ಹೈ.ಕ	ಇತರೆ	ಒಟ್ಟು	ಶ್ರೀಮತಿ/ಶ್ರೀ	ಹೈ.ಕ	ಇತರೆ.	ಹೈ.ಕ	ಇತರೆ	ಹೈ.ಕ	ಇತರೆ	ಹೈ.ಕ	ಇತರೆ
																				1–33	1–100						
1	*2*	*3*	*4*	*5*	*6*	*7*	*8*	*9*	*10*	*11*	*12*	*13*	*14*	*15*	*16*	*17*	*18*	*19*	*20*	*21*	*22*	*23*	*24*	*25*	*26*	*27*	*28*
29	2	2	4	–	1	1	2	3	5	12	12	24	–	4	4	1	–	1	1) ವಿ.ಪ್ರಭಾಕರ್, ಜಿಉವಿಕ, ಯಾದಗಿರಿ. (ನೇನೇ)(3)(ಪ್ರ.2ಎ).	–	1 (ಪ.ಜಾ)	–	2ಎ	–	ಪ.ಜಾ	–	2ಎ
																			2) ಶ್ರೀನಿವಾಸರಾವ್ ಬಹದ್ದೂರ್, ಜಿಉವಿಕ, ಬಳ್ಳಾರಿ. (ನೇನೇ)(4)(ಪಜಾ).	–	2 (ಸಾ.ಅ)	–	ಪ.ಜಾ	–	ಸಾ.ಅ.	–	ಪ. ಜಾ
																			3) ಶ್ರೀದೇವಿ. ಜಿಉವಿಕ, ಬೀದರ್. (ನೇನೇ)(12)(ಪ.ಜಾ)	–	3 (ಪಪಂ)	–	ಪ. ಜಾ.	–	ಪ. ಪಂ	–	ಪ. ಜಾ
																			4) ವಿಜಯ ಕುಮಾರ್.ಟಿ., ಜಿಉವಿಕ, ರಾಯಚೂರು. (ನೇನೇ)(14)(ಪ.ಜಾ)	–	4 (ಸಾಅ)	–	ಪ. ಜಾ	–	ಸಾಅ	–	ಪ. ಜಾ
ರೋಸ್ಟರ್ ಸೈಕಲ್‌ನಲ್ಲಿ ತಪ್ಪಿಹೋದ ರೋಸ್ಟರ್ ಬಿಂದುಗಳ ವಿವರಗಳು																									ಪಪಂ–1 ಸಾಅ–1		

ಬಿ.ಎಂ.ವಿಜಯ ಶಂಕರ್, ಭಾ.ಆ.ಸೇ.

ಆಯುಕ್ತರು, ಉದ್ಯೋಗ ಮತ್ತು ತರಬೇತಿ.

ಅನುಸೂಚಿ

ಸಂಖ್ಯೆ.ಉತನಿ/ಉದ್ಯೋಗ/ಆಡಳಿತ–1/ವಿವ–34/2013–14, ದಿನಾಂಕ: 03–12–2014.

(ಎ) ***ವೃಂದದ ಹೆಸರು:–*** **ದ್ವಿತೀಯ ದರ್ಜೆ ಸಹಾಯಕ.**

1. ಸೇವೆ:ಉದ್ಯೋಗ ಮತ್ತು ತರಬೇತಿ ಇಲಾಖೆ (ಉದ್ಯೋಗ ವಿಭಾಗ).

2. *ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಒಟ್ಟು ಮೂಲ ವೃಂದ ಬಲ:–* **42**

(ಅ) ಸ್ಥಳೀಯ ವೃಂದ ಬಲ–6

(ಆ) ರಾಜ್ಯ ಮಟ್ಟದ ಸ್ಥಳೀಯ ವೃಂದ ಬಲ–7

3. *ಅನುಚ್ಛೇದ 371 (ಜೆ) ಅಡಿಯಲ್ಲಿ ಸ್ಥಳೀಯ ವೃಂದದಲ್ಲಿ ಶೇ.80 ರ ಪ್ರಮಾಣದಲ್ಲಿ ಮೀಸಲಿರಿಸಿದ ಹುದ್ದೆಗಳು*–**5**

4. *ಅನುಚ್ಛೇದ 371 (ಜೆ) ಅಡಿಯಲ್ಲಿ ರಾಜ್ಯ ಮಟ್ಟದ ಸ್ಥಳೀಯ ವೃಂದದ ರಚನೆಗೆ ಶೇ.8 ರ ಪ್ರಮಾಣದಲ್ಲಿ ಮೀಸಲಿರಿಸಿದ ಹುದ್ದೆಗಳು* **–1**

5. *<u>ಹುದ್ದೆಗಳ ಭರ್ತಿ ವಿಧಾನ:</u>* ಎ. ಶೇ.75 ರ ಪ್ರಮಾಣದ ನೇರ ನೇಮಕಾತಿ.

ಬಿ. ಶೇ.25 ರ ಪ್ರಮಾಣದ ಮುಂಬಡ್ತಿ.

6. *<u>ಪೋಷಕ ವೃಂದ:</u>*– ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಅರ್ಹತೆ ಹೊಂದಿರುವ ಗ್ರೂಪ್–ಡಿ ನೌಕರರು

7. ಅಭಿಮತ ನೀಡುವ ಮೂಲಕ ಸ್ಥಳೀಯ ವೃಂದವನ್ನು ಆಯ್ಕೆ ಮಾಡಿಕೊಂಡ ಸೇವೆಯಲ್ಲಿರುವ ಅರ್ಹ ಅಭ್ಯರ್ಥಿಗಳು:–

I ಮುಂಬಡ್ತಿ – **1**

II ನೇರ ನೇಮಕಾತಿ – **3**

III ಒಟ್ಟು:– 4

8. ಹಂಚಿಕೆ ಮಾಡಿದ ನಂತರ ಸ್ಥಳೀಯ ವೃಂದದಲ್ಲಿ ಲಭ್ಯವಿರುವ ಖಾಲಿ ಹುದ್ದೆಗಳು.

I ಮುಂಬಡ್ತಿ – **ಇಲ್ಲ**

II ನೇರ ನೇಮಕಾತಿ – **2**

III ಒಟ್ಟು:– 2

ಮೂಲ ವೃಂದ ಬಲ	371(ಜೆ) ಅಡಿಯಲ್ಲಿ ಸ್ಥಳೀಯ ವೃಂದದಲ್ಲಿ ಶೇ.80 ರಷ್ಟು ಪ್ರಮಾಣದಲ್ಲಿ ಮೀಸಲಿರಿಸಿದ ಹುದ್ದೆಗಳು			371(ಜೆ) ಅಡಿಯಲ್ಲಿ ರಾಜ್ಯ ಮಟ್ಟದ ಕಚೇರಿಯಲ್ಲಿ ಶೇ.8 ರಷ್ಟು ಪ್ರಮಾಣದಲ್ಲಿ ಮೀಸಲಿರಿಸಿದ ಹುದ್ದೆಗಳು			ಮೀಸಲಾದ ಒಟ್ಟು ಹುದ್ದೆಗಳು.			ಸ್ಥಳೀಯ ವೃಂದಕ್ಕೆ ಮೀಸಲಿರಿಸಿದ ಹುದ್ದೆಗಳ ನಂತರ ಮೂಲ ವೃಂದದಲ್ಲಿ ಉಳಿದ ಹುದ್ದೆಗಳ ಸಂಖ್ಯಾಬಲ.			ಸ್ಥಳೀಯ ವೃಂದ ಸೇರ್ಪಡೆಗೆ ಅಭಿಮತ ನೀಡಿರುವವರ ಸಂಖ್ಯೆ.			ಅಭಿಮತದ ತರುವಾಯ ಸ್ಥಳೀಯ ವೃಂದದಲ್ಲಿ ಭರ್ತಿ ಸಲುವಾಗಿ ಉಳಿಯುವ ರಿಕ್ತ ಸ್ಥಾನಗಳು.			ಅಭಿಮತ ನೀಡಿಕೆ ಆಧಾರದಲ್ಲಿ ಸ್ಥಳೀಯ ವೃಂದಕ್ಕೆ ಹಂಚಿಕೆ ಮಾಡಲಾದ ಇಲಾಖೆಯ ಉದ್ಯೋಗ ವಿಭಾಗದಲ್ಲಿರುವ ಸ್ಥಳೀಯ ನೌಕರರು (ಜೇಷ್ಠತಾ ಪಟ್ಟಿಯ ಕ್ರಮಾನುಗತ ಕ್ರಮ ಸಂಖ್ಯೆ ಹಾಗೂ ಮೂಲ ರೋಸ್ಟರ್ ಸಹಿತ).	ರೋಸ್ಟರ್ ಸೈಕಲ್ ಪ್ರಕಾರ ರೋಸ್ಟರ್ ಬಿಂದುಗಳು.		ಸ್ಥಳೀಯ ವೃಂದಕ್ಕೆ ಹಂಚಿಕೆ ಯಾದ ನೌಕರರು ಪ್ರತಿನಿಧಿ ಸುತ್ತಿರುವ ರೋಸ್ಟರ್ ಬಿಂದುಗಳು		ರೋಸ್ಟರ್ ಸಮ ತೋಲನಕ್ಕೆ ಪರಿಗಣಿಸ ಬೇಕಾದ ಬಿಟ್ಟು ಹೋದ ರೋಸ್ಟರ್ ಬಿಂದುಗಳು.		ರೋಸ್ಟರ್ ಸೈಕಲ್‌ನಲ್ಲಿ ಬಿಟ್ಟುಹೋದ ರೋಸ್ಟರ್ ಬಿಂದು ಗಳನ್ನು ಬದಲಾವಣೆ ಮಾಡಿರುವ ರೋಸ್ಟರ್ ಬಿಂದುಗಳು.	
	ಮುಂ	ನೇ.ನೇ	ಒಟ್ಟು	ಮುಂ	ನೇ.ನೇ	ಒಟ್ಟು	ಮುಂ	ನೇ.ನೇ	ಒಟ್ಟು	ಮುಂ	ನೇ.ನೇ	ಒಟ್ಟು	ಮುಂ	ನೇ.ನೇ	ಒಟ್ಟು	ಮುಂ	ನೇ.ನೇ	ಒಟ್ಟು	ಶ್ರೀಮತಿ/ಶ್ರೀ	ಮುಂ 1–33	ನೇ.ನೇ. 1–100	ಮುಂ	ನೇ.ನೇ.	ಮುಂ	ನೇ.ನೇ.	ಮುಂ	ನೇ.ನೇ.
1	*2*	*3*	*4*	*5*	*6*	*7*	*8*	*9*	*10*	*11*	*12*	*13*	*14*	*15*	*16*	*17*	*18*	*19*	*20*	*21*	*22*	*23*	*24*	*25*	*26*	*27*	*28*
42	1	4	5	–	1	1	1	5	6	9	27	36	1	3	4	–	2	2	1) ಡಿ.ಪಿ.ಭಾವಿ. ಜಿಉವಿಕ, ಗುಲ್ಬರ್ಗಾ. (ನೇನೇ)(7(ಸಾ.ಅ).	–	1 (ಪಜಾ)	–	ಸಾ. ಅ	–	ಪ. ಜಾ	–	ಸಾ. ಅ
																			2) ಟಿ.ಎ.ಎಂ.ಮೃತ್ಯುಂಜಯ. ಜಿಉವಿಕ, ಬಳ್ಳಾರಿ. (ಮುಂ)(25)(ಸಾ.ಅ.).	2 (ಪ.ಪಂ)	–	ಸಾ.ಅ	–	ಪ.ಪಂ	–	ಸಾ.ಅ.	–
																			3) ಶ್ರೀಕಾಂತ ಮುದಕಪ್ಪ ಬೆದವಟ್ಟಿ, ಜಿಉವಿಕ, ರಾಯಚೂರು. (ನೇನೇ)(28)ಪ.ಜಾ	–	3 (ಪಪಂ)	–	ಪ. ಜಾ	–	ಪ. ಪಂ.	–	ಪ. ಜಾ
																			4) ಶಿವಾನಂದ, ಜಿಉವಿಕ, ಬೀದರ್. (ನೇನೇ)(29)(ಪ್ರ–3ಬಿ).	–	4 (ಸಾಅ)	–	3ಬಿ	–	ಸಾ. ಅ	–	3ಬಿ
ರೋಸ್ಟರ್ ಸೈಕಲ್‌ನಲ್ಲಿ ತಪ್ಪಿಹೋಗಿರುವ ರೋಸ್ಟರ್ ಬಿಂದುಗಳು:–																								ಪಪಂ –1	ಪಪಂ–1, ಸಾಅ –1		

ಬಿ.ಎಂ.ವಿಜಯ ಶಂಕರ್, ಭಾ.ಆ.ಸೇ.

ಆಯುಕ್ತರು, ಉದ್ಯೋಗ ಮತ್ತು ತರಬೇತಿ.

ಅನುಸೂಚಿ

ಸಂಖ್ಯೆ:ಉತನಿ/ಉದ್ಯೋಗ/ಆಡಳಿತ–1/ವಿವ–34/2013–14, ದಿನಾಂಕ: 3–12–2014.

(ಎ) ***ವೃಂದದ ಹೆಸರು:*– ಬೆರಳಚ್ಚುಗಾರ.**

1. ಸೇವೆ: ಉದ್ಯೋಗ ಮತ್ತು ತರಬೇತಿ ಇಲಾಖೆ (ಉದ್ಯೋಗ ವಿಭಾಗ).

2. *ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಒಟ್ಟು ಮೂಲ ವೃಂದ ಬಲ:*– **34**

   (ಅ) ಸ್ಥಳೀಯ ವೃಂದ ಬಲ–7

   (ಆ) ರಾಜ್ಯ ಮಟ್ಟದ ಸ್ಥಳೀಯ ವೃಂದ ಬಲ–5

3. *ಅನುಚ್ಛೇದ 371 (ಜೆ) ಅಡಿಯಲ್ಲಿ ಸ್ಥಳೀಯ ವೃಂದದಲ್ಲಿ ಶೇ.80 ರ ಪ್ರಮಾಣದಲ್ಲಿ ಮೀಸಲಿರಿಸಿದ ಹುದ್ದೆಗಳು*–**6**

4. *ಅನುಚ್ಛೇದ 371 (ಜೆ) ಅಡಿಯಲ್ಲಿ ರಾಜ್ಯ ಮಟ್ಟದ ಸ್ಥಳೀಯ ವೃಂದದ ರಚನೆಗೆ ಶೇ.8 ರ ಪ್ರಮಾಣದಲ್ಲಿ ಮೀಸಲಿರಿಸಿದ ಹುದ್ದೆಗಳು* **–1**

5. <u>*ಹುದ್ದೆಗಳ ಭರ್ತಿ ವಿಧಾನ:*</u> ಎ. ಶೇ. 100 ರ ಪ್ರಮಾಣದ ನೇರ ನೇಮಕಾತಿ.

   ಬಿ. ಮುಂಬಡ್ತಿ ಇಲ್ಲ

6. <u>*ಪೋಷಕ ವೃಂದ:*</u>– ಇಲ್ಲ

7. ಅಭಿಮತ ನೀಡುವ ಮೂಲಕ ಸ್ಥಳೀಯ ವೃಂದವನ್ನು ಆಯ್ಕೆ ಮಾಡಿಕೊಂಡ ಸೇವೆಯಲ್ಲಿರುವ ಅರ್ಹ ಅಭ್ಯರ್ಥಿಗಳು:–

   I ಮುಂಬಡ್ತಿ – ಇಲ್ಲ

   II ನೇರ ನೇಮಕಾತಿ – **2**

   III ಒಟ್ಟು:– 2

8. ಹಂಚಿಕೆ ಮಾಡಿದ ನಂತರ ಸ್ಥಳೀಯ ವೃಂದದಲ್ಲಿ ಲಭ್ಯವಿರುವ ಖಾಲಿ ಹುದ್ದೆಗಳು.

   I ಮುಂಬಡ್ತಿ – ಇಲ್ಲ

   II ನೇರ ನೇಮಕಾತಿ – **5**

   III ಒಟ್ಟು:– 5

ಮೂಲ ವೃಂದ ಬಲ	371(ಜೆ) ಅಡಿಯಲ್ಲಿ ಸ್ಥಳೀಯ ವೃಂದದಲ್ಲಿ ಶೇ.80 ರಷ್ಟು ಪ್ರಮಾಣದಲ್ಲಿ ಮೀಸಲಿರಿಸಿದ ಹುದ್ದೆಗಳು			371(ಜೆ) ಅಡಿಯಲ್ಲಿ ರಾಜ್ಯ ಮಟ್ಟದ ಕಚೇರಿಯಲ್ಲಿ ಶೇ.8 ರಷ್ಟು ಪ್ರಮಾಣದಲ್ಲಿ ಮೀಸಲಿರಿಸಿದ ಹುದ್ದೆಗಳು			ಮೀಸಲಾದ ಒಟ್ಟು ಹುದ್ದೆಗಳು.			ಸ್ಥಳೀಯ ವೃಂದಕ್ಕೆ ಮೀಸಲಿರಿಸಿದ ಹುದ್ದೆಗಳ ನಂತರ ಮೂಲ ವೃಂದದಲ್ಲಿ ಉಳಿದ ಹುದ್ದೆಗಳ ಸಂಖ್ಯಾಬಲ.			ಸ್ಥಳೀಯ ವೃಂದ ಸೇರ್ಪಡೆಗೆ ಅಭಿಮತ ನೀಡಿರುವವರ ಸಂಖ್ಯೆ.			ಅಭಿಮತದ ತರುವಾಯ ಸ್ಥಳೀಯ ವೃಂದದಲ್ಲಿ ಭರ್ತಿ ಸಲುವಾಗಿ ಉಳಿಯುವ ರಿಕ್ತ ಸ್ಥಾನಗಳು.			ಅಭಿಮತ ನೀಡಿಕೆ ಆಧಾರದಲ್ಲಿ ಸ್ಥಳೀಯ ವೃಂದಕ್ಕೆ ಹಂಚಿಕೆ ಮಾಡಲಾದ ಇಲಾಖೆಯ ಉದ್ಯೋಗ ವಿಭಾಗದಲ್ಲಿರುವ ಸ್ಥಳೀಯ ನೌಕರರು (ಜೇಷ್ಠತಾ ಪಟ್ಟಿಯ ಕ್ರಮಾನುಗತ ಕ್ರಮ ಸಂಖ್ಯೆ ಹಾಗೂ ಮೂಲ ರೋಸ್ಟರ್ ಸಹಿತ).	ರೋಸ್ಟರ್ ಸೈಕಲ್ ಪ್ರಕಾರ ರೋಸ್ಟರ್ ಬಿಂದುಗಳು.		ಸ್ಥಳೀಯ ವೃಂದಕ್ಕೆ ಹಂಚಿಕೆ ಯಾದ ನೌಕರರು ಪ್ರತಿನಿಧಿ ಸುತ್ತಿರುವ ರೋಸ್ಟರ್ ಬಿಂದುಗಳು		ರೋಸ್ಟರ್ ಸಮ ತೋಲನಕ್ಕೆ ಪರಿಗಣಿಸ ಬೇಕಾದ ಬಿಟ್ಟು ಹೋದ ರೋಸ್ಟರ್ ಬಿಂದುಗಳು.		ರೋಸ್ಟರ್ ಸೈಕಲ್‌ನಲ್ಲಿ ಬಿಟ್ಟುಹೋದ ರೋಸ್ಟರ್ ಬಿಂದು ಗಳನ್ನು ಬದಲಾವಣೆ ಮಾಡಿರುವ ರೋಸ್ಟರ್ ಬಿಂದುಗಳು.	
	ಮುಂ	ನೇ.ನೇ	ಒಟ್ಟು	ಮುಂ	ನೇ.ನೇ	ಒಟ್ಟು	ಮುಂ	ನೇ.ನೇ	ಒಟ್ಟು	ಮುಂ	ನೇ.ನೇ	ಒಟ್ಟು	ಮುಂ	ನೇ.ನೇ	ಒಟ್ಟು	ಮುಂ	ನೇ.ನೇ	ಒಟ್ಟು	ಶ್ರೀಮತಿ/ಶ್ರೀ	ಮುಂ 1–33	ನೇ.ನೇ. 1–100	ಮುಂ	ನೇ.ನೇ.	ಮುಂ	ನೇ.ನೇ.	ಮುಂ	ನೇ.ನೇ.
1	*2*	*3*	*4*	*5*	*6*	*7*	*8*	*9*	*10*	*11*	*12*	*13*	*14*	*15*	*16*	*17*	*18*	*19*	*20*	*21*	*22*	*23*	*24*	*25*	*26*	*27*	*28*
34	–	6	6	–	1	1	–	7	7	–	27	27	–	2	2	–	5	5	1) ಮಹದೇವಸ್ವಾಮಿ. ಯುಇಐಜಿಬಿ, ಗುಲ್ಬರ್ಗಾ. (ನೇನೇ)(13)(ಪ್ರ–3ಬಿ).	–	1 (ಪಜಾ)	–	3ಬಿ	–	ಪಜಾ	–	3ಬಿ
																			2) ಸೀಮಾದೇವಿ ಬೆಣ್ಣೂರ. ಜಿಉವಿಕ, ಗುಲ್ಬರ್ಗಾ. (ನೇನೇ)(14)(ಪ್ರ–1).	–	2 (ಸಾಅ)	–	ಪ್ರ–1	–	ಸಾಅ	–	ಪ್ರ1
ರೋಸ್ಟರ್ ಸೈಕಲ್‌ನಲ್ಲಿ ತಪ್ಪಿಹೋಗಿರುವ ರೋಸ್ಟರ್ ಬಿಂದುಗಳ ವಿವರಗಳು:–																									ಪಜಾ–1 ಸಾಅ–1		

ಬಿ.ಎಂ.ವಿಜಯ ಶಂಕರ್, ಭಾ.ಆ.ಸೇ.
ಆಯುಕ್ತರು, ಉದ್ಯೋಗ ಮತ್ತು ತರಬೇತಿ.

ಅನುಸೂಚಿ

ಸಂಖ್ಯೆ.ಉತನಿ/ಉದ್ಯೋಗ/ಆಡಳಿತ–1/ವಿವ–34/2013–14, ದಿನಾಂಕ: 3–12–2014.

(ಎ) ***ವೃಂದದ ಹೆಸರು:*– ಹಿರಿಯ ಬೆರಳಚ್ಚುಗಾರ.**

1. ಸೇವೆ:ಉದ್ಯೋಗ ಮತ್ತು ತರಬೇತಿ ಇಲಾಖೆ (ಉದ್ಯೋಗ ವಿಭಾಗ).

2. *ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಒಟ್ಟು ಮೂಲ ವೃಂದ ಬಲ:*– **7**

   (ಅ) ಸ್ಥಳೀಯ ವೃಂದ ಬಲ–1

   (ಆ) ರಾಜ್ಯ ಮಟ್ಟದ ಸ್ಥಳೀಯ ವೃಂದ ಬಲ–1

3. *ಅನುಚ್ಛೇದ 371 (ಜೆ) ಅಡಿಯಲ್ಲಿ ಸ್ಥಳೀಯ ವೃಂದದಲ್ಲಿ ಶೇ.80 ರ ಪ್ರಮಾಣದಲ್ಲಿ ಮೀಸಲಿರಿಸಿದ ಹುದ್ದೆಗಳು*–**1**

4. *ಅನುಚ್ಛೇದ 371 (ಜೆ) ಅಡಿಯಲ್ಲಿ ರಾಜ್ಯ ಮಟ್ಟದ ಸ್ಥಳೀಯ ವೃಂದದ ರಚನೆಗೆ ಶೇ.8 ರ ಪ್ರಮಾಣದಲ್ಲಿ ಮೀಸಲಿರಿಸಿದ ಹುದ್ದೆಗಳು* **–1**

5. *ಹುದ್ದೆಗಳ ಭರ್ತಿ ವಿಧಾನ:* ಎ. ಶೇ. 100 ರ ಪ್ರಮಾಣದ ಮುಂಬಡ್ತಿ.

   ಬಿ.

6. *ಪೋಷಕ ವೃಂದ:*– ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಅರ್ಹತೆ ಹೊಂದಿರುವ ಬೆರಳಚ್ಚುಗಾರರು.

7. ಅಭಿಮತ ನೀಡುವ ಮೂಲಕ ಸ್ಥಳೀಯ ವೃಂದವನ್ನು ಆಯ್ಕೆ ಮಾಡಿಕೊಂಡ ಸೇವೆಯಲ್ಲಿರುವ ಅರ್ಹ ಅಭ್ಯರ್ಥಿಗಳು:–

   I ಮುಂಬಡ್ತಿ – **ಇಲ್ಲ**

   II ನೇರ ನೇಮಕಾತಿ – **ಇಲ್ಲ**

   III ಒಟ್ಟು:– ಇಲ್ಲ

8. ಹಂಚಿಕೆ ಮಾಡಿದ ನಂತರ ಸ್ಥಳೀಯ ವೃಂದದಲ್ಲಿ ಲಭ್ಯವಿರುವ ಖಾಲಿ ಹುದ್ದೆಗಳು.

   I ಮುಂಬಡ್ತಿ – **2**

   II ನೇರ ನೇಮಕಾತಿ – **ಇಲ್ಲ**

   III ಒಟ್ಟು:– 2

ಮೂಲ ವೃಂದ ಬಲ	371(ಜೆ) ಅಡಿಯಲ್ಲಿ ಸ್ಥಳೀಯ ವೃಂದದಲ್ಲಿ ಶೇ.80 ರಷ್ಟು ಪ್ರಮಾಣದಲ್ಲಿ ಮೀಸಲಿರಿಸಿದ ಹುದ್ದೆಗಳು			371(ಜೆ) ಅಡಿಯಲ್ಲಿ ರಾಜ್ಯ ಮಟ್ಟದ ಕಚೇರಿಯಲ್ಲಿ ಶೇ.8 ರಷ್ಟು ಪ್ರಮಾಣದಲ್ಲಿ ಮೀಸಲಿರಿಸಿದ ಹುದ್ದೆಗಳು			ಮೀಸಲಾದ ಒಟ್ಟು ಹುದ್ದೆಗಳು.			ಸ್ಥಳೀಯ ವೃಂದಕ್ಕೆ ಮೀಸಲಿರಿಸಿದ ಹುದ್ದೆಗಳ ನಂತರ ಮೂಲ ವೃಂದದಲ್ಲಿ ಉಳಿದ ಹುದ್ದೆಗಳ ಸಂಖ್ಯಾಬಲ.			ಸ್ಥಳೀಯ ವೃಂದ ಸೇರ್ಪಡೆಗೆ ಅಭಿಮತ ನೀಡಿರುವವರ ಸಂಖ್ಯೆ.			ಅಭಿಮತದ ತರುವಾಯ ಸ್ಥಳೀಯ ವೃಂದದಲ್ಲಿ ಭರ್ತಿ ಸಲುವಾಗಿ ಉಳಿಯುವ ರಿಕ್ತ ಸ್ಥಾನಗಳು.			ಅಭಿಮತ ನೀಡಿಕೆ ಆಧಾರದಲ್ಲಿ ಸ್ಥಳೀಯ ವೃಂದಕ್ಕೆ ಹಂಚಿಕೆ ಮಾಡಲಾದ ಇಲಾಖೆಯ ಉದ್ಯೋಗ ವಿಭಾಗದಲ್ಲಿರುವ ಸ್ಥಳೀಯ ನೌಕರರು (ಜೇಷ್ಠತಾ ಪಟ್ಟಿಯ ಕ್ರಮಾನುಗತ ಕ್ರಮ ಸಂಖ್ಯೆ ಹಾಗೂ ಮೂಲ ರೋಸ್ಟರ್ ಸಹಿತ).	ರೋಸ್ಟರ್ ಸೈಕಲ್ ಪ್ರಕಾರ ರೋಸ್ಟರ್ ಬಿಂದುಗಳು.		ಸ್ಥಳೀಯ ವೃಂದಕ್ಕೆ ಹಂಚಿಕೆ ಯಾದ ನೌಕರರು ಪ್ರತಿನಿಧಿ ಸುತ್ತಿರುವ ರೋಸ್ಟರ್ ಬಿಂದುಗಳು		ರೋಸ್ಟರ್ ಸಮ ತೋಲನಕ್ಕೆ ಪರಿಗಣಿಸ ಬೇಕಾದ ಬಿಟ್ಟು ಹೋದ ರೋಸ್ಟರ್ ಬಿಂದುಗಳು.		ರೋಸ್ಟರ್ ಸೈಕಲ್‌ನಲ್ಲಿ ಬಿಟ್ಟುಹೋದ ರೋಸ್ಟರ್ ಬಿಂದು ಗಳನ್ನು ಬದಲಾವಣೆ ಮಾಡಿರುವ ರೋಸ್ಟರ್ ಬಿಂದುಗಳು.	
	ಮುಂ	ನೇ.ನೇ	ಒಟ್ಟು	ಮುಂ	ನೇ.ನೇ	ಒಟ್ಟು	ಮುಂ	ನೇ.ನೇ	ಒಟ್ಟು	ಮುಂ	ನೇ.ನೇ	ಒಟ್ಟು	ಮುಂ	ನೇ.ನೇ	ಒಟ್ಟು	ಮುಂ	ನೇ.ನೇ	ಒಟ್ಟು	ಶ್ರೀಮತಿ/ಶ್ರೀ	ಮುಂ 1–33	ನೇ.ನೇ. 1–100	ಮುಂ	ನೇ.ನೇ.	ಮುಂ	ನೇ.ನೇ.	ಮುಂ	ನೇ.ನೇ.
1	*2*	*3*	*4*	*5*	*6*	*7*	*8*	*9*	*10*	*11*	*12*	*13*	*14*	*15*	*16*	*17*	*18*	*19*	*20*	*21*	*22*	*23*	*24*	*25*	*26*	*27*	*28*
7	1	–	1	1	–	1	2	–	2	5	–	5	–	–	–	2	–	2	ಯಾರೂ ಅಭಿಮತ ನೀಡಿರುವುದಿಲ್ಲ.								

ಬಿ.ಎಂ.ವಿಜಯ ಶಂಕರ್, ಭಾ.ಆ.ಸೇ.

ಆಯುಕ್ತರು, ಉದ್ಯೋಗ ಮತ್ತು ತರಬೇತಿ.

ಅನುಸೂಚಿ

ಸಂಖ್ಯೆ:ಉತನಿ/ಉದ್ಯೋಗ/ಆಡಳಿತ–1/ವಿವ–34/2013–14, ದಿನಾಂಕ: 03–12–2014.

(ಎ) ***ವೃಂದದ ಹೆಸರು:– ಗ್ರೂಪ್–ಡಿ.***

1. ಸೇವೆ: ಉದ್ಯೋಗ ಮತ್ತು ತರಬೇತಿ ಇಲಾಖೆ (ಉದ್ಯೋಗ ವಿಭಾಗ).
2. *ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಒಟ್ಟು ಮೂಲ ವೃಂದ ಬಲ:–* **71**
   (ಅ) ಸ್ಥಳೀಯ ವೃಂದ ಬಲ–12
   (ಆ) ರಾಜ್ಯ ಮಟ್ಟದ ಸ್ಥಳೀಯ ವೃಂದ ಬಲ–4
3. *ಅನುಚ್ಛೇದ 371 (ಜೆ) ಅಡಿಯಲ್ಲಿ ಸ್ಥಳೀಯ ವೃಂದದಲ್ಲಿ ಶೇ.80 ರ ಪ್ರಮಾಣದಲ್ಲಿ ಮೀಸಲಿರಿಸಿದ ಹುದ್ದೆಗಳು*–**11**
4. *ಅನುಚ್ಛೇದ 371 (ಜೆ) ಅಡಿಯಲ್ಲಿ ರಾಜ್ಯ ಮಟ್ಟದ ಸ್ಥಳೀಯ ವೃಂದದ ರಚನೆಗೆ ಶೇ.8 ರ ಪ್ರಮಾಣದಲ್ಲಿ ಮೀಸಲಿರಿಸಿದ ಹುದ್ದೆಗಳು* **–1**
5. ***ಹುದ್ದೆಗಳ ಭರ್ತಿ ವಿಧಾನ:*** ಎ. ಶೇ. 100 ರ ಪ್ರಮಾಣದ ನೇರ ನೇಮಕಾತಿ.
   ಬಿ.
6. *ಪೋಷಕ ವೃಂದ:*– ಇರುವುದಿಲ್ಲ.

7. ಅಭಿಮತ ನೀಡುವ ಮೂಲಕ ಸ್ಥಳೀಯ ವೃಂದವನ್ನು ಆಯ್ಕೆ ಮಾಡಿಕೊಂಡ ಸೇವೆಯಲ್ಲಿರುವ ಅರ್ಹ ಅಭ್ಯರ್ಥಿಗಳು:–

I ಮುಂಬಡ್ತಿ – ಇಲ್ಲ

II ನೇರ ನೇಮಕಾತಿ – **7**

III ಒಟ್ಟು:– 7

8. ಹಂಚಿಕೆ ಮಾಡಿದ ನಂತರ ಸ್ಥಳೀಯ ವೃಂದದಲ್ಲಿ ಲಭ್ಯವಿರುವ ಖಾಲಿ ಹುದ್ದೆಗಳು.

I ಮುಂಬಡ್ತಿ – ಇಲ್ಲ

II ನೇರ ನೇಮಕಾತಿ – **5**

III ಒಟ್ಟು:– 5

ಮೂಲ ವೃಂದ ಬಲ	*371(ಜೆ) ಅಡಿಯಲ್ಲಿ ಸ್ಥಳೀಯ ವೃಂದದಲ್ಲಿ ಶೇ.85 ರಷ್ಟು ಪ್ರಮಾಣದಲ್ಲಿ ಮೀಸಲಿರಿಸಿದ ಹುದ್ದೆಗಳು*			*371(ಜೆ) ಅಡಿಯಲ್ಲಿ ರಾಜ್ಯ ಮಟ್ಟದ ಕಚೇರಿಯಲ್ಲಿ ಶೇ.8 ರಷ್ಟು ಪ್ರಮಾಣದಲ್ಲಿ ಮೀಸಲಿರಿಸಿದ ಹುದ್ದೆಗಳು*			*ಮೀಸಲಾದ ಒಟ್ಟು ಹುದ್ದೆಗಳು.*			*ಸ್ಥಳೀಯ ವೃಂದಕ್ಕೆ ಮೀಸಲಿರಿಸಿದ ಹುದ್ದೆಗಳ ನಂತರ ಮೂಲ ವೃಂದದಲ್ಲಿ ಉಳಿದ ಹುದ್ದೆಗಳ ಸಂಖ್ಯಾಬಲ.*			*ಸ್ಥಳೀಯ ವೃಂದ ಸೇರ್ಪಡೆಗೆ ಅಭಿಮತ ನೀಡಿರುವವರ ಸಂಖ್ಯೆ.*			*ಅಭಿಮತದ ತರುವಾಯ ಸ್ಥಳೀಯ ವೃಂದದಲ್ಲಿ ಭರ್ತಿ ಸಲುವಾಗಿ ಉಳಿಯುವ ರಿಕ್ತ ಸ್ಥಾನಗಳು.*			*ಅಭಿಮತ ನೀಡಿಕೆ ಆಧಾರದಲ್ಲಿ ಸ್ಥಳೀಯ ವೃಂದಕ್ಕೆ ಹಂಚಿಕೆ ಮಾಡಲಾದ ಇಲಾಖೆಯ ಉದ್ಯೋಗ ವಿಭಾಗದಲ್ಲಿರುವ ಸ್ಥಳೀಯ ನೌಕರರು (ಜೇಷ್ಠತಾ ಪಟ್ಟಿಯ ಕ್ರಮಾನುಗತ ಕ್ರಮ ಸಂಖ್ಯೆ ಹಾಗೂ ಮೂಲ ರೋಸ್ಟರ್ ಸಹಿತ).*	*ರೋಸ್ಟರ್ ಸೈಕಲ್ ಪ್ರಕಾರ ರೋಸ್ಟರ್ ಬಿಂದುಗಳು.*		*ಸ್ಥಳೀಯ ವೃಂದಕ್ಕೆ ಹಂಚಿಕೆ ಯಾದ ನೌಕರರು ಪ್ರತಿನಿಧಿ ಸುತ್ತಿರುವ ರೋಸ್ಟರ್ ಬಿಂದುಗಳು*		*ರೋಸ್ಟರ್ ಸಮ ತೋಲನಕ್ಕೆ ಪರಿಗಣಿಸ ಬೇಕಾದ ಬಿಟ್ಟು ಹೋದ ರೋಸ್ಟರ್ ಬಿಂದುಗಳು.*		*ರೋಸ್ಟರ್ ಸೈಕಲ್‌ನಲ್ಲಿ ಬಿಟ್ಟುಹೋದ ರೋಸ್ಟರ್ ಬಿಂದುಗಳನ್ನು ಬದಲಾವಣೆ ಮಾಡಿರುವ ರೋಸ್ಟರ್ ಬಿಂದುಗಳು.*	
	ಹೈಕ	ಉ.ವೃ.	ಒಟ್ಟು	ಹೈಕ	ಉ.ವೃ.	ಒಟ್ಟು	ಹೈಕ	ಉ.ವೃ.	ಒಟ್ಟು	ಹೈಕ	ಉ.ವೃ.	ಒಟ್ಟು	ಹೈಕ	ಉ.ವೃ.	ಒಟ್ಟು	ಹೈಕ	ಉ.ವೃ.	ಒಟ್ಟು	ಶ್ರೀಮತಿ/ಶ್ರೀ	ಹೈಕ 1–33	ಉ.ವೃ. 1–100	ಹೈಕ	ಉ.ವೃ.	ಹೈಕ	ಉ.ವೃ.	ಹೈಕ	ಉ.ವೃ.
1	*2*	*3*	*4*	*5*	*6*	*7*	*8*	*9*	*10*	*11*	*12*	*13*	*14*	*15*	*16*	*17*	*18*	*19*	*20*	*21*	*22*	*23*	*24*	*25*	*26*	*27*	*28*
71	–	11	11	–	1	1	–	12	12	–	59	59	–	7	7	–	5	5	1) ಬಿ.ರಾಮಾಂಜನಮ್ಮ. ಜಿಲುವಿಕ, ಕೊಪ್ಪಳ. (ನೇನೇ)(1)(ಪ.ಪಂ.)	–	1 (ಪ.ಜಾ)	–	ಪ. ಪಂ	–	ಪ.ಜಾ	–	ಪ. ಪ ಂ
																			2) ಪಿ.ಚಿಟ್ಟಿಬಾಬು, ಜಿಲುವಿಕ, ಕೊಪ್ಪಳ. (ನೇನೇ)(11)(ಸಾ.ಅ.)	–	2 (ಸಾ.ಅ)	–	ಸಾ.ಅ	–	–	–	–

1	2	3	4	5	6	7	8	9	10	11	12	13	14	15	16	17	18	19	20	21	22	23	24	25	26	27	28
																			3) ಜಹೀರ್‌ಅಹ್ಮದ್, ಯುಇಐಜಿಬಿ, ಗುಲ್ಬರ್ಗಾ.(ನೇನೇ) (14) (ಪ್ರ–2ಬಿ).	–	3 (ಪಪಂ)	–	ಪ್ರ–2ಬಿ	–	ಪ. ಪಂ	–	ಪ್ರ. 2ಬಿ
																			4) ಶಾಂತಾಬಾಯಿ, ಜಿಉವಿಕ, ಗುಲ್ಬರ್ಗಾ. (ನೇನೇ)(25)(ಪ್ರ–2ಎ).	–	4 (ಸಾಅ)	–	ಪ್ರ–2ಎ	–	ಸಾಅ	–	ಪ್ರ – 2ಎ
																			5) ಎನ್.ಭಾಗ್ಯಮ್ಮ, ಜಿಉವಿಕ, ಬಳ್ಳಾರಿ. (ನೇನೇ)(26)(ಪ್ರ–2ಎ).	–	5 (ಪ್ರ–1)	–	ಪ್ರ–2ಎ	–	ಪ್ರ–1	–	ಪ್ರ – 2ಎ
																			6) ಸಲೀಮಾಬಾನು, ಜಿಉವಿಕ, ರಾಯಚೂರು. (ನೇನೇ)(44) (ಪ್ರ–2ಬಿ).	–	6 (ಸಾ.ಅ)	–	ಪ್ರ–2ಬಿ	–	ಸಾ.ಅ	–	ಪ್ರ – 2ಬಿ
